ANANTHKUMAR PRATISHTHANA

# ಅನಂತಪಥ

ಸಂಪುಟ-1 ಜೂನ್ - 2021 ಸಂಚಿಕೆ - 12





ಉದಾತ್ತ ಚಿಂತನಾಕ್ರಮ ಮತ್ತು ಕ್ರಿಯಾಶೀಲತೆಗಳ ಸಂಗಮ

ನಾನು ಕಂಡ ಅನಂತಕುಮಾರ್ ಮಾಲಿಕೆಯಲ್ಲಿ ಪುಟ-2

ಡಾ. ಹೆಚ್. ಎಸ್. ನಾಗರಾಜ


# ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ವೈಭವ



ಒಂದು ಖಾತೆಯ ಸಚಿವರಾಗಿ ಅಧಿಕಾರ ವಹಿಸಿಕೊಂಡು ಕೇವಲ ಒಂಭತ್ತು ತಿಂಗಳುಗಳಲ್ಲಿ ಏನು ಸಾಧಿಸಬಹುದು ಎಂದು ಯಾರಾದರೂ ಪ್ರಶ್ನಿಸಿದರೆ ದಿವಂಗತ ಅನಂತಕುಮಾರರ ಕಡೆ ಬೆರಳು ತೋರಿಸಬಹುದು. ದಿನಾಂಕ 30/01/1999 ರಂದು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆ ಸಚಿವರಾಗಿ ಅಧಿಕಾರ ವಹಿಸಿಕೊಂಡ ಅನಂತಕುಮಾರರು ಆ ಖಾತೆಯನ್ನು ನಿರ್ವಹಿಸಿದ್ದು ಕೇವಲ ಎಂಟು ತಿಂಗಳು ಮತ್ತು ಹದಿನಾಲ್ಕು ದಿನಗಳು. ಆದರೆ ಆ ಅಲ್ಪಾವಧಿಯಲ್ಲಿ ಅವರು ಮಾಡಿದ ಸಾಧನೆ ಅಪಾರ. ಅವರ ಕಾಲದಲ್ಲಿ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ಕಾಣಿಸಿದ ಸಂಚಲನ ಅದಕ್ಕೆ ಮೊದಲು ಕಂಡಿರಲಿಲ್ಲ ಎಂದು ಹೇಳಬಹುದು.

ದೇಶಕ್ಕೊಂದು ವ್ಯಕ್ತಿತ್ವವಿದೆ ಎನ್ನುವುದಾದರೆ ಆ ವ್ಯಕ್ತಿತ್ವವನ್ನು ಗ್ರಹಿಸುವುದು ಅದರ ಸಂಸ್ಕೃತಿಯ ಮೂಲಕ. ದೇಶದ ಒಟ್ಟು ಆಚಾರ-ವಿಚಾರ, ಆಹಾರ ವಿಹಾರ, ಉಡುಗೆ-ತೊಡುಗೆ, ಸಾಹಿತ್ಯ, ಕಲೆ, ಹಬ್ಬ-ಹರಿದಿನಗಳು, ಭಾಷೆ, ಆಚರಣೆಗಳು ಮುಂತಾದ ಎಲ್ಲವೂ ಸಮಾಜಪುರುಷನ ಸಂಸ್ಕೃತಿಯ ಗುರುತುಗಳಾಗಿರುತ್ತವೆ. ಭಾರತೀಯ ಸಂಸ್ಕೃತಿಯು ಜಗತ್ತಿನಲ್ಲಿ ಅತ್ಯಂತ ಪುರಾತನ ಹಾಗೂ ಇಂದಿಗೂ ಉಳಿದುಕೊಂಡು ಬಂದಿರುವ ಏಕೈಕ ಸಂಸ್ಕೃತಿಯಾಗಿದೆ. ದುರದೃಷ್ಟವಶಾತ್ ಕಳೆದ ಮುನ್ನೂರು ವರ್ಷಗಳಿಂದ ನಮ್ಮ ಈ ವೈಭವೋಪೇತ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಬದಲು ದೇಶದ ಬಡತನ, ರೋಗರುಜಿನಗಳು, ಕಂದಾಚಾರ ಮುಂತಾದ ಋಣಾತ್ಮಕ ವಿಷಯಗಳನ್ನು ಪ್ರದರ್ಶಿಸಿ ದೇಶದ ಬಗ್ಗೆ ಕೀಳರಿಮೆ ಮೂಡಿಸುವಂತಹ ಕೆಲಸವನ್ನು ನಮ್ಮ ಇತಿಹಾಸಕಾರರು ಮಾಡಿದ್ದಾರೆ. ಆಧುನಿಕ ಕಾಲದಲ್ಲಿಯೂ ಇಂತಹ ಸ್ಥಾಪಿತ ಹಿತಾಸಕ್ತಿಗಳು ತಿರುಚಿದ ಇತಿಹಾಸವನ್ನು ರಚಿಸಿ ಪಾಠಮಾಡುತ್ತಿರುವುದೂ ತಿಳಿದ ವಿಚಾರವೇ ಆಗಿದೆ. ದೇಶ ಸ್ವಾತಂತ್ರ್ಯ ಗಳಿಸಿದ ಮೇಲೂ ಇದೇ ಪ್ರವೃತ್ತಿ ಮುಂದುವರಿದದ್ದು ನಮ್ಮ ಆಳುವ ವರ್ಗದ ಅಭಿಮಾನ ಶೂನ್ಯತೆಗೆ ನಿದರ್ಶನವಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಖರ ದೇಶಾಭಿಮಾನದಿಂದ ತುಡಿಯುತ್ತಿದ್ದ ರಾಷ್ಟ್ರವಾದಿ ಸರಕಾರವು ಭಾರತೀಯ ಜನತಾ ಪಕ್ಷದ ನೇತೃತ್ವದಲ್ಲಿ ಸ್ಥಾಪಿತವಾದಾಗ ಸಂಸ್ಕೃತಿ ಚಿಂತಕರ ಮನಸ್ಸಿನಲ್ಲಿ ಹೊಸ ಭರವಸೆಯ ಕುಡಿಯೊಡೆಯಿತು. ಅದಕ್ಕೆ ಪೂರಕವಾಗಿ "ದೇಶ ಮೊದಲು" ಎಂಬ ಧ್ಯೇಯದಿಂದ ರಾಜಕಾರಣಕ್ಕಿಳಿದಿದ್ದ ಅನಂತಕುಮಾರರು ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಖಾತೆಯ ನೇತೃತ್ವವನ್ನು ವಹಿಸಿಕೊಂಡರು. ಅನಂತಕುಮಾರರು ದಂತಗೋಪುರದಲ್ಲಿ ಕುಳಿತು ಸಂಸ್ಕೃತಿಯ ಅಧ್ಯಯನವನ್ನು ಮಾಡಿದವರಲ್ಲ. ಅವರು ಜನರೊಡನೆ ಬೆರೆತು, ಅವರ ಆಹಾರ ವಿಹಾರಗಳಲ್ಲಿ ಜೊತೆಯಾಗಿ, ದೇಶದಾದ್ಯಂತ ಸಂಚರಿಸಿ ಭಾರತೀಯ ಸಂಸ್ಕೃತಿಯನ್ನು ನೇರವಾಗಿ ಪರಿಚಯಿಸಿಕೊಂಡವರು. ಜೊತೆಗೆ, ಸನಾತನ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದ ಕುಟುಂಬದಲ್ಲಿ ಜನಿಸಿದ ಅವರ ದೃಷ್ಟಿಕೋನವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ನೇರ್ಪುಗೊಳಿಸಿತ್ತು. ಹೀಗಾಗಿ, ಅಧಿಕಾರ ವಹಿಸಿಕೊಳ್ಳುವ ಮೊದಲೇ ಭಾರತದ ಸಂಸ್ಕೃತಿ ಇಲಾಖೆ ಯಾವ ರೀತಿ ಕೆಲಸ ಮಾಡಬೇಕೆಂಬ ಸ್ಪಷ್ಟ ಕಲ್ಪನೆ ಅವರಿಗಿತ್ತು.

### ಸಿಂಧೂ ದರ್ಶನ ಉತ್ಸವ

ನದನದಿಗಳ ಸಂಸ್ಕೃತಿ ನಮ್ಮದು. ಆಸೇತು ಹಿಮಾಚಲದವರೆಗೆ ನದಿಗಳು ನಮ್ಮ ಸಂಸ್ಕೃತಿಯನ್ನು ಪೊರೆದ ತೊಟ್ಟಿಲುಗಳಾಗಿದ್ದವು. ನದಿಗಳು ನಮ್ಮ ನಿತ್ಯಪೂಜೆಯ ಅನಿವಾರ್ಯ ಭಾಗವಾಗಿವೆ. ಇದಕ್ಕೆ ಪ್ರತೀಕವಾಗಿ ತಮ್ಮ ಗುರು ಶ್ರೀ ಲಾಲ್ ಕೃಷ್ಣ ಅದ್ವಾನಿಯವರು 1996 ರಲ್ಲಿ ಪ್ರಾರಂಭಿಸಿದ ಸಿಂಧೂ ದರ್ಶನ ಅಭಿಯಾನವನ್ನು ಅನಂತಕುಮಾರರು ಸಿಂಧೂ ದರ್ಶನ ಉತ್ಸವವನ್ನಾಗಿ ಪರಿವರ್ತಿಸಿದರು. ಈ ಉತ್ಸವದ ಸ್ಮರಣಾರ್ಥ ಅಂಚೆ ಚೀಟಿಯನ್ನು ಬಿಡುಗಡೆ ಮಾಡುವ ಮೂಲಕ 28/07/1999 ರಂದು ಉತ್ಸವಕ್ಕೆ ಚಾಲನೆ ನೀಡಿದರು. ಭಾರತೀಯ ಪ್ರಾಚೀನ ನಾಗರಿಕತೆ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುವ ಸಿಂಧೂ ನದಿಯನ್ನು ಪ್ರತೀಕವಾಗಿರಿಸಿಕೊಂಡು ಭಾರತದ ಸಾಂಸ್ಕೃತಿಕ ವೈವಿಧ್ಯವನ್ನು ಜಗತ್ತಿಗೆ ಪರಿಚಯಿಸುವ ಮತ್ತು ಸಾಮುದಾಯಿಕ ಸೌಹಾರ್ದವನ್ನು ಬೆಳೆಸುವ ಉದ್ದೇಶದಿಂದ ಈ ಉತ್ಸವ ಪ್ರಾರಂಭವಾಯಿತು.

ಭೌಗೋಳಿಕವಾಗಿ ಅತ್ಯಂತ ಸುಂದರ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಶ್ರೀಮಂತವಾಗಿರುವ ಲಡಾಖ್ ಪ್ರದೇಶವನ್ನು ಉತ್ಸವಕ್ಕಾಗಿ ಆರಿಸಿದ್ದು ಯುಕ್ತವಾಗಿತ್ತು. ಲೇಹ್ ಪಟ್ಟಣದಲ್ಲಿ ನಡೆಯುತ್ತಿರುವ ಈ ಉತ್ಸವವು ಇಡೀ ಪ್ರದೇಶದ ಪ್ರವಾಸಿ ತಾಣಗಳ ಅಭಿವೃದ್ಧಿ ಮತ್ತು ಹಿಂದೂ ಸಂಸ್ಕೃತಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಯಶಸ್ವಿಯಾಗಿದೆ. ಲೇಹ್ ಪಟ್ಟಣದಿಂದ 15 ಕಿಲೋಮೀಟರ್ ದೂರದಲ್ಲಿರುವ ಶೇ ಎಂಬ ಪ್ರದೇಶದಲ್ಲಿ ಸಿಂಧೂ ಸಾಂಸ್ಕೃತಿಕ ಕೇಂದ್ರದ ಕಟ್ಟಡಕ್ಕೆ




ಪುಟ 4 ರಲ್ಲಿ ಮುಂದುವರೆದಿದೆ





ಆಹಾರ ಕ್ರಾಂತಿ: ಉತ್ತಮ ಆಹಾರ, ಉತ್ತಮ ವಿಚಾರ
ಪುಟ - 3
ಡಾ. ಯಲ್ಲೋಜಿರಾವ್ ಮಿರಜಕರ್

ಸಮಾಜಮುಖಿ ಕೆಲಸಗಳಲ್ಲಿ ವಿದ್ಯಾರ್ಥಿಗಳ ಪಾತ್ರ
ಜಿ.ಆರ್. ಜಗದೀಶ್
ಪುಟ - 5



ಸೂಕ್ಷ್ಮಜೀವಿ ಪ್ರಪಂಚ ಮತ್ತು ನಮ್ಮ ಆಹಾರ ಪದ್ಧತಿ
ಡಾ. ರಶ್ಮಿ ಕುಲಕರ್ಣಿ
ಪುಟ - 6





ಸಮಾಜಸೇವೆಯಲ್ಲಿ ಯುವಜನರು ಹೇಗೆ ಪಾಲ್ಗೊಳ್ಳಬಹುದು?
ಪುಟ - 8
ಡಾ. ಶ್ರೀನಿವಾಸ ಬಳ್ಳಿ

# ಉದಾತ್ತ ಚಿಂತನಾಕ್ರಮ ಮತ್ತು ಕ್ರಿಯಾಶೀಲತೆಗಳ ಸಂಗಮ

ನಾನು ಕಂಡಂತೆ




ಅನಂತಕುಮಾರ್

ಡಾ. ಹೆಚ್. ಎಸ್. ನಾಗರಾಜ
ಶಿಕ್ಷಣ ತಜ್ಞರು

ನೂರು ವರ್ಷ ಬದುಕಿದ ಒಬ್ಬ ವ್ಯಕ್ತಿ ಎಷ್ಟೊಂದು ಸಾಧನೆ ಮಾಡಬಹುದೋ ಅಷ್ಟನ್ನು ಅಥವಾ ಅದಕ್ಕಿಂತ ಹೆಚ್ಚಿನ ಸಾಧನೆಯನ್ನು ಅನಂತ ಕುಮಾರರರು ಕೇವಲ ೫೯ ವರ್ಷಗಳ ಜೀವಿತದಲ್ಲಿ ಮಾಡಿದರು. ಸಾಮಾನ್ಯ ಮಧ್ಯಮವರ್ಗದಲ್ಲಿ ಜನಿಸಿದ ಹುಡುಗನೊಬ್ಬ ತನ್ನ ಹದಿನಾರು, ಹದಿನೇಳನೆಯ ವಯಸ್ಸಿಗೆ ಸಮಾಜಸೇವೆಯ ಗೀಳು ಹಿಡಿಸಿಕೊಂಡು ತನ್ನ ದೇಶವು ಸುದೃಢವಾಗಿರಬೇಕು, ತನ್ನ ದೇಶವು ತುಂಬ ಶಕ್ತಿಶಾಲಿಯಾಗಿ ಇರಬೇಕು ಎಂಬ ಘನವಾದ ಉದ್ದೇಶಕ್ಕೆ ತನ್ನ ಜೀವನವನ್ನೇ ಮುಡಿಪಾಗಿಡುವ ಉದಾಹರಣೆಗಳು ತೀರ ವಿರಳ. ನಮ್ಮ ದೇಶಕ್ಕೊಂದು ದೊಡ್ಡ ಚರಿತ್ರೆಯಿದೆ, ನಮ್ಮ ದೇಶವು ದೊಡ್ಡ ಪರಂಪರೆ ಹೊಂದಿದೆ, ಅದನ್ನು ಮುಂದುವರೆಸಿ ಬೆಳೆಸಿಕೊಂಡು ಹೋಗುವ ಕಾರ್ಯ ನಿರಂತರವಾಗಿ ನಡೆಯಬೇಕು ಎನ್ನುವುದನ್ನು ತಮ್ಮ ಚಿಕ್ಕ ವಯಸ್ಸಿನಲ್ಲಿಯೇ ಅರಿತುಕೊಂಡು ಪ್ರಖರವಾಗಿ ತಮ್ಮ ವಿಚಾರಗಳನ್ನು ಅವರು ಮಂಡಿಸುತ್ತಿದ್ದುದನ್ನು ನಾವು ಕೇಳಿದ್ದೇವೆ. ಇತರರೂ ಅವರ ಬಗ್ಗೆ ಅಭಿಮಾನದಿಂದ ಮಾತನಾಡುವುದನ್ನೂ ನಾನು ಕೇಳಿದ್ದೇನೆ. ಹಾಗೆಂದು ಅದನ್ನು ಅವರ ಹತ್ತಿರ ವ್ಯಕ್ತಪಡಿಸಿದಾಗ ಅವರು ತುಂಬ ಸಂಕೋಚ ಪಟ್ಟುಕೊಳ್ಳುತ್ತಿದ್ದರು.

ಒಂದು ಪಕ್ಷವನ್ನು ಕಟ್ಟುವುದು ಸುಲಭದ ಕೆಲಸವಲ್ಲ. ಪಕ್ಷವನ್ನು ಕಟ್ಟುವ ಕೆಲಸದಲ್ಲಿ ಅಥವ ಬೇರೆ ಬೇರೆ ಕಾರ್ಯಕ್ರಮಗಳಿಗಾಗಿ ಪ್ರಯಾಣ ಮಾಡಬೇಕಾಗಿ ಬರುತ್ತದೆ. ಎಲ್ಲ ಕಡೆಗಳಲ್ಲಿಯೂ ಉತ್ತಮ ಊಟ ವಸತಿ ಸೌಕರ್ಯಗಳು ದೊರೆಯುವುದು ನಿಗದಿಯಿರುವುದಿಲ್ಲ. ಅನೇಕ ಕಡೆ ಅನಾನುಕೂಲತೆ ಇರುತ್ತದೆ. ಪರಿಚಯದವರೆಂದು ಹೇಳಿಕೊಳ್ಳಲು ಯಾರೊಬ್ಬರೂ ಇಲ್ಲದಿರುವ ಊರುಗಳಿಗೂ ಹೋಗಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಬರೀ ನೀರಿನಿಂದ ಹೊಟ್ಟೆ ತುಂಬಿಸಿಕೊಂಡು ಬಸ್ ಸ್ಟಾಂಡಿನಲ್ಲಿ ಮಲಗಬೇಕಾದ ಸಂದರ್ಭಗಳೂ ಬಂದೊದಗಿದ್ದವು. ಇಂತಹ ಎಲ್ಲ ಪರಿಸ್ಥಿತಿಗಳನ್ನೂ ನಗುನಗುತ್ತ ಎದುರಿಸಬೇಕಾದರೆ ಆ ಯುವಕನ ಹೃದಯದಲ್ಲಿ ದೇಶಭಕ್ತಿಯ ಜ್ಯೋತಿ ಎಷ್ಟು ಪ್ರಖರವಾಗಿ ಬೆಳಗುತ್ತಿದ್ದಿರಬೇಕು! ಅಂತಹ ಒಂದು ಉದಾತ್ತ ಚಿಂತನಾಕ್ರಮ ಮತ್ತು ಕ್ರಿಯಾಶೀಲತೆ ಅವರಲ್ಲಿ ಬಾಲ್ಯದಿಂದಲೂ ಬೆಳೆದು ಬಂದಿತ್ತು.

ಸೃಷ್ಟಿಯಾದದ್ದೆಲ್ಲ ನಾಶವಾಗಬೇಕೆಂಬುದು ನಿಯಮ. ಅಂದರೆ ಯಾವುದು ಸೃಷ್ಟಿಯಾಗಿಲ್ಲವೋ ಅದಕ್ಕೆ ನಾಶವೂ ಇಲ್ಲವೆಂದು ಅರ್ಥ. ಅದು ಹಿಂದೆಯೂ ಇತ್ತು, ಈಗಲೂ ಇದೆ, ಮುಂದೆಯೂ ಇರುತ್ತದೆ. ಅಂತಹ ಅನಂತವಾದ ಚೇತನ ಅವರದ್ದು.



ಅನಂತಪಥ ಮಾಸ ಪತ್ರಿಕೆಯ ಹನ್ನೊಂದನೆಯ ಸಂಚಿಕೆಯನ್ನು ಖ್ಯಾತ ಶಿಕ್ಷಣ ತಜ್ಞ ಡಾ. ಎಚ್ ಎಸ್ ನಾಗರಾಜ ಅವರು ಬಿಡುಗಡೆ ಮಾಡಿದರು. ಡಾ. ಎಚ್ ಎಸ್ ನಾಗರಾಜ ಅವರು 1991ರಲ್ಲಿ ಸ್ಥಾಪಿಸಿದ ಬೇಸ್ ಶಿಕ್ಷಣ ಸಂಸ್ಥೆ ಕಳೆದ 20 ವರ್ಷಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದೆ. ಇದೀಗ ತಾವು ಸ್ಥಾಪಿಸಿರುವ ಪ್ರಯೋಗ ಇನ್ಸ್ಟಿಟ್ಯೂಟ್ ಆಫ್ ಎಜುಕೇಶನಲ್ ರಿಸರ್ಚ್ ಎಂಬ ಸಂಸ್ಥೆಯ ಬಗೆಗೆ ಶ್ರೀ ನಾಗರಾಜ ಪರಿಚಯಾತ್ಮಕ ವಿವರಣೆ ನೀಡಿದರು.

ವಿಜ್ಞಾನದ ವಿದ್ಯಾಭ್ಯಾಸದಲ್ಲಿ ಸಂಶೋಧನೆಯನ್ನು ಮಾಡುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆ, ಪ್ರಯೋಗ. ಈ ಸಂಸ್ಥೆಗೆ ನಿವೃತ್ತ ನ್ಯಾಯಮೂರ್ತಿ ಶ್ರೀ ಎಂ ಎನ್ ವೆಂಕಟಾಚಲಯ್ಯನವರೂ ಸೇರಿದಂತೆ ಸಮಾಜದ ಗಣ್ಯ ವ್ಯಕ್ತಿಗಳು ಸಲಹಾಕಾರರಾಗಿದ್ದಾರೆ.

ಸಂಶೋಧನೆಯ ಮೂಲಕ ಶಾಲೆಯಲ್ಲಿ ಕಲಿಕೆಯ ಗುಣಮಟ್ಟವನ್ನು ಉತ್ತಮಪಡಿಸಿ ಕಲಿಕೆಯ ಪ್ರಯೋಜನಗಳನ್ನು ಸಂಪೂರ್ಣವಾಗಿ ಸಮಾಜದ ಪರಿವರ್ತನೆಯಲ್ಲಿ ತೊಡಗಿಸುವುದು ಈ ಸಂಸ್ಥೆಯ ಉದ್ದೇಶ. ವಿದ್ಯಾರ್ಥಿಗಳಲ್ಲಿ ಸಾಮರ್ಥ್ಯವೃದ್ಧಿ, ಶಿಕ್ಷಕರಿಗೆ ಕಲಿಸುವ ವಿಧಾನಗಳಲ್ಲಿ ಪರಿಣಿತಿ ಮತ್ತು ವಿಷಯಗಳು, ಶಿಕ್ಷಣ ಕ್ಷೇತ್ರದ ಸಂಶೋಧಕರಿಗೆ ಜಾಗತಿಕ ಶಿಕ್ಷಣಗಳ ಜ್ಞಾನ ಮತ್ತು ಶಿಕ್ಷಣ ಮಂಡಳಿಗಳಿಗೆ ಉತ್ತಮ ನೀತಿನಿರೂಪಣೆಗೆ ನೆರವು ನೀಡುವುದು ಇವುಗಳ ಕಡೆ ಪ್ರಯೋಗ ಸಂಸ್ಥೆಯು ಆದ್ಯ ಗಮನವನ್ನು ಹರಿಸುತ್ತದೆ.

ನವೆಂಬರ್, 2015 ರಲ್ಲಿ ಪ್ರಾರಂಭವಾದ ಈ ಸಂಸ್ಥೆಯು ಈ ವರ್ಷ 3500 ವಿದ್ಯಾರ್ಥಿಗಳನ್ನು ತಲುಪಿದ್ದು 2024ರ ವೇಳೆಗೆ 400 ಶಾಲೆಗಳ 19000 ವಿದ್ಯಾರ್ಥಿಗಳನ್ನು ತಲುಪುವ ಮಹತ್ವಾಕಾಂಕ್ಷೆ ಹೊಂದಿದೆ.

ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಅನಂತಕುಮಾರ್ ಪ್ರತಿಷ್ಠಾನವು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಹಾಗೂ ಅನಂತಕುಮಾರರ ಸ್ನೇಹಿತರು, ಬಂಧುಗಳು ಮತ್ತು ಅಸಂಖ್ಯಾತ ಅಭಿಮಾನಿಗಳ ಪರಿಶ್ರಮದಿಂದ ವ್ಯಾಪಕವಾಗಿ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಳ್ಳಲಿದೆ ಎಂಬ ವಿಶ್ವಾಸ ನನಗಿದೆ.

ಅನಂತಕುಮಾರರ ಸಾಧನೆಗಳನ್ನು ದಾಖಲಿಸುವುದು ಮತ್ತು ಅವರ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದು ಪ್ರತಿಷ್ಠಾನದ ಉದ್ದೇಶ. ಈ ದಿಸೆಯಲ್ಲಿ ಮೊದಲ ಹಂತದ ಕಾರ್ಯಕ್ರಮವಾಗಿ ಅನಂತ ಪಥ ಪತ್ರಿಕೆ ಪ್ರಕಟವಾಗುತ್ತಿದೆ. ಅನಂತಕುಮಾರರ ಸಾಧನೆಗಳನ್ನು ಪಟ್ಟಿಮಾಡುವುದೆಂದರೆ ನಾಲ್ಕು ಜನ ಕುರುಡರು ಆನೆಯೊಂದನ್ನು ಮುಟ್ಟಿ, ಅದು ಕಂಬದ ಹಾಗಿದೆ, ಗೋಡೆಯ ಹಾಗಿದೆ, ಹಗ್ಗದ ಹಾಗಿದೆ, ಹಾಗಿದೆ, ಹೀಗಿದೆ ಎಂದು ಹೇಳಿದಂತೆ. ಒಬ್ಬ ವ್ಯಕ್ತಿಯನ್ನು ಸಂಪೂರ್ಣವಾಗಿ ಅರಿತು ಕೊಳ್ಳುವುದು ಕಷ್ಟ. ತಂದೆ ತಾಯಿಯರಿಗೆ ತಮ್ಮ ಮಕ್ಕಳನ್ನೇ ಅರಿತುಕೊಳ್ಳುವುದು ಕಷ್ಟ. ಹೀಗಿರುವಾಗ ಅನಂತಕುಮಾರರಂತಹ ಧೀಮಂತ ವ್ಯಕ್ತಿಯ ಬಗ್ಗೆ ನಮ್ಮ ಗ್ರಹಿಕೆಗಳನ್ನು ವಿವರಿಸಬಹುದಷ್ಟೇ ಹೊರತು, ಅವರನ್ನು ಸಂಪೂರ್ಣವಾಗಿ ಅರಿತುಕೊಂಡಿದ್ದೇವೆ ಎನ್ನುವಂತಿಲ್ಲ.

ಅನಂತಕುಮಾರ್ ಬಗ್ಗೆ ಎಲ್ಲವೂ ಗೊತ್ತಿದ್ದರೆ ಅದು ಅನಂತಕುಮಾರ್ ಒಬ್ಬರಿಗೆ ಮಾತ್ರ. ಅವರ ಕನಸುಗಳು, ಕಲ್ಪನೆಗಳು, ಯೋಜನೆಗಳು ಏನೇನಿರಬಹುದೆಂಬ ಕಲ್ಪನೆಯೂ ನಮಗಿಲ್ಲ. ಆದರೆ ಅವರೊಡನೆ ಒಡನಾಡುವಾಗ ಅವುಗಳ ಕುರುಹುಗಳು ನಮಗೆ ಕಾಣಿಸುತ್ತಿದ್ದವು. ಅವರ ಮುಂದಿನ ನಡೆಯ ಮುನ್ನೋಟ ಮಾತ್ರ ನಮಗೆ ಕಾಣಿಸುತ್ತಿತ್ತು. ನಾವು ಅರ್ಥಮಾಡಿಕೊಂಡಷ್ಟನ್ನು ಪ್ರತಿಬಿಂಬಿಸುವಂತಹ ಕಾರ್ಯಕ್ರಮಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಪ್ರತಿಷ್ಠಾನ ಯಶಸ್ವಿಯಾಗುತ್ತದೆ ಎಂಬ ನಂಬಿಕೆ ನನ್ನದು.

ಅನಂತಕುಮಾರರನ್ನು ನಾನು ಕಳೆದ ಮೂವತ್ತು ವರ್ಷಗಳಿಂದ ನೇರವಾಗಿ ಮತ್ತು ಪರೋಕ್ಷವಾಗಿ ಬಲ್ಲೆ. ಅವರ ಬಗ್ಗೆ ಯಾರಾದರೂ ಮಾತನಾಡುವುದನ್ನು ಕೇಳಿದಾಗ, ಇವರು ನಮ್ಮವರು ಎಂದು ಹೆಮ್ಮೆ ಉಂಟಾಗುತ್ತಿತ್ತು. ವಿದ್ಯಾರ್ಥಿ ಪರಿಷತ್ತಿನಲ್ಲಿ ಅವರಿಗೆ ಮಾರ್ಗದರ್ಶಕರಾಗಿದ್ದ ಹಿರಿಯರು ನನಗೂ ಪರಿಚಯದವರಾಗಿದ್ದರು. ಹೆತ್ತ ತಾಯಿ ತನ್ನ ಮಕ್ಕಳ ಬಗ್ಗೆ ಹೆಮ್ಮೆ ಪಡುವಂತೆಯೇ ಇಡೀ ಸಮಾಜವೇ ಹೆಮ್ಮೆ ಪಡಬಹುದಾದ ವ್ಯಕ್ತಿತ್ವವೊಂದು ಅಂದು ರೂಪುಗೊಳ್ಳುತ್ತಿತ್ತು. ಬೇರೆಯವರಲ್ಲಿ ಕಾಣಲಾಗದ ಅಸಾಧಾರಣ ಪರಿಪಕ್ವತೆ ಹಾಗೂ ದೂರದೃಷ್ಟಿ ಅವರಲ್ಲಿ ಎಳವೆಯಲ್ಲಿಯೇ ಕಾಣಿಸುತ್ತಿತ್ತು. ಇದು ಸುಮಾರು ಮೂವತ್ತು ವರ್ಷಗಳ ಹಿಂದಿನ ಮಾತು.

ನಂತರ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಅನಂತಕುಮಾರರು ನಮ್ಮ ಮನೆಗೆ ಪ್ರತಿವಾರ ಬರುತ್ತಿದ್ದರು. ಹಾಗೆ ಬಂದಾಗಲೆಲ್ಲ ಒಂದು ಉತ್ತಮ ವಿದ್ಯಾಸಂಸ್ಥೆಯ ರೂಪು ರೇಷೆ ಹೇಗಿರಬೇಕು, ಅದರ ಉದ್ದೇಶಗಳು ಏನಿರಬೇಕು, ಯಾವ ಕ್ರಮಗಳನ್ನು ತೆಗೆದುಕೊಂಡರೆ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಬಹುದು, ಮಕ್ಕಳಿಗೆ ಯಾವ ರೀತಿಯ ಸೌಲಭ್ಯಗಳು ಬೇಕು, ಮುಂತಾದ ಅನೇಕ ವಿಷಯಗಳ ಬಗ್ಗೆ ಆಸ್ಥೆಯಿಂದ ಚರ್ಚಿಸುತ್ತಿದ್ದರು.

ಅವರ ಹತ್ತಿರ ಮಾತನಾಡುವಾಗ ಯಾವ ರೀತಿಯ ಔಪಚಾರಿಕತೆಯೂ ಇರುತ್ತಿರಲಿಲ್ಲ. ಮನೆಯಲ್ಲಿ ಕುಳಿತು ಮಾತನಾಡುತ್ತಿರುವಂತೆ ನಿರಾಳವಾದ ವಾತಾವರಣ ನಿರ್ಮಾಣವಾಗುತ್ತಿತ್ತು. ಅವರು ಸಾಮಾನ್ಯವಾಗಿ ವಾರಾಂತ್ಯಗಳಲ್ಲಿ ಬೆಂಗಳೂರಿಗೆ ಬರುತ್ತಿದ್ದರು. ಹಾಗೆ ಬಂದಾಗಲೆಲ್ಲ ಅವರ ಸುತ್ತ ಹಬ್ಬದ ವಾತಾವರಣ ಉಂಟಾಗುತ್ತಿತ್ತು. ಅವರ ಸುತ್ತ ಜನರು ನೆರೆದಿರುತ್ತಿದ್ದರು. ಮಾತುಕತೆಯಲ್ಲಿ ಔಪಚಾರಿಕತೆಯಿರಲಿಲ್ಲ ಎನ್ನಿಸಿದರೂ ಅಲ್ಲಿ ಸೇರಿದ್ದ ಪ್ರತಿಯೊಬ್ಬರನ್ನೂ ಅವರು ಗಮನಿಸಿಕೊಳ್ಳುತ್ತಿದ್ದರು. ತಮ್ಮ ಮಾತುಕತೆಗಳ ಮಧ್ಯದಲ್ಲಿಯೇ ಎದ್ದು ಬಂದು ಕಾಫಿ, ತಿಂಡಿ ಮುಂತಾದ ನಮ್ಮ ವೈಯಕ್ತಿಕ ಅಗತ್ಯಗಳನ್ನೂ ವಿಚಾರಿಸಿಕೊಳ್ಳುತ್ತಿದ್ದರು. ತಾವೊಬ್ಬ ಕೇಂದ್ರ ಸರಕಾರದ ಪ್ರಮುಖ ಮಂತ್ರಿ, ಸಂಸದ ಎಂಬುದನ್ನು ಎಂದಿಗೂ ತೋರಿಸಿಕೊಳ್ಳುತ್ತಿರಲಿಲ್ಲ. ಪ್ರತಿಯೊಬ್ಬರನ್ನೂ ತಮ್ಮ ಕುಟುಂಬದ ಸದಸ್ಯರೆಂದು ಭಾವಿಸಿ ನಡೆದುಕೊಳ್ಳುತ್ತಿದ್ದರು. ನಮ್ಮ ಅಭಿಪ್ರಾಯಗಳಿಗೆ ಸಹಮತಿ ಇಲ್ಲದಿದ್ದರೆ "ಅದು ಹಾಗಲ್ಲ, ಹೀಗೆ" ಎಂದು ಯಾವತ್ತೂ ಹೇಳುತ್ತಿರಲಿಲ್ಲ. ನೀವೇನೂ ಹೇಳುತ್ತಿಲ್ಲ, ಏಕೆ ಎಂದು ಕೇಳಿದರೆ ಆಗ ಮಾತ್ರ ತುಂಬ ವಿಶಿಷ್ಟವಾದ ಹಾಗೂ ಸಮಂಜಸವಾದ ಪರಿಹಾರವನ್ನು ಸೂಚಿಸುತ್ತಿದ್ದರು. ವಿವಿಧ ಆಯಾಮಗಳಲ್ಲಿ ಯೋಚಿಸಿ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸಬಲ್ಲ ತೀಕ್ಷ್ಣ ಬುದ್ಧಿಮತ್ತೆ ಅವರಲ್ಲಿತ್ತು. ತಮ್ಮ ಮಾತಿನಿಂದ ಬೇರೆಯವರಿಗೆ ನೋವುಂಟಾಗಬಾರದು, ಕೇಳುಗರಲ್ಲಿ ತಮ್ಮ ಯೋಚನಾಕ್ರಮವೇ ತಪ್ಪು ಎಂಬ ಭಾವನೆ ಬರಬಾರದೆಂಬ ಎಚ್ಚರಿಕೆಯಿಂದ ಅವರು ಮಾತನಾಡುತ್ತಿದ್ದರು. ಎಲ್ಲರ ಮಾತುಗಳನ್ನು ಸಮಾಧಾನಚಿತ್ತದಿಂದ ಆಲಿಸಿ " ಎಷ್ಟು ಚೆನ್ನಾಗಿ ಮಾತನಾಡಿದಿರಿ" ಎಂದು ಪ್ರಶಂಸೆ ಮಾಡುತ್ತಿದ್ದರು. ಇದೊಂದು ರೀತಿಯ ಅಸಾಧಾರಣ ವಾಕ್ಚಾತುರ್ಯ.

ಸಲಹೆಗಳನ್ನು ನೀಡುವಾಗ ನಮ್ಮನ್ನು ಅವರು ತಿದ್ದುತ್ತಿದ್ದಾರೆ ಎಂಬ

ಪುಟ 6 ರಲ್ಲಿ ಮುಂದುವರೆದಿದೆ

# ಆಹಾರ ಕ್ರಾಂತಿ: ಉತ್ತಮ ಆಹಾರ, ಉತ್ತಮ ವಿಚಾರ

ಡಾ. ಯಲ್ಲೋಜಿರಾವ್ ಮಿರಜಕರ್
ಆಹಾರ ವಿಜ್ಞಾನಿ ಮತ್ತು ಸಂಶೋಧಕರು

Nation First Dialogues
'ದೇಶ ಮೊದಲು' ಸಂವಾದ

ಹಸಿರು ಕ್ರಾಂತಿ, ಶ್ವೇತಕ್ರಾಂತಿಯ ನಂತರ ನಾವು ಈಗ ಆಹಾರ ಕ್ರಾಂತಿಯ ಮೇಲೆ ಗಮನ ಹರಿಸಿದ್ದೇವೆ. ಇದು GIST ಸಂಸ್ಥೆಯ ಒಂದು ಉಪಕ್ರಮ. ಭಾರತದ ಸಂದರ್ಭದಲ್ಲಿ ಅತ್ಯಂತ ಪ್ರಸ್ತುತವಾಗಿರುವ ಈ ವಿಚಾರವನ್ನು ಇತರರೊಡನೆ ಹಂಚಿಕೊಂಡಾಗ ವಿಜ್ಞಾನ ಭಾರತಿ ಸಂಸ್ಥೆಯು ಇದನ್ನು ನೇರವಾಗಿ ಸ್ವಾಗತಿಸಿತು. ನಂತರದ ದಿನಗಳಲ್ಲಿ ನಾವು CSIR, ವಿಜ್ಞಾನ ಪ್ರಸಾರ, ಪ್ರಭಾಸ ಮುಂತಾದ ಅನೇಕ ಸಂಸ್ಥೆಗಳೊಡನೆ ಚರ್ಚಿಸಿದಾಗ ಈ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ ಎಂದು ಎಲ್ಲರೂ ಅಭಿಪ್ರಾಯ ವ್ಯಕ್ತಪಡಿಸಿದರು.

**ಬೌದ್ಧಿಕ ಬೆಳವಣಿಗೆ ಮತ್ತು ಪೌಷ್ಟಿಕ ಆಹಾರ**

ದೈಹಿಕ ಹಾಗೂ ಮಾನಸಿಕ ಬೆಳವಣಿಗೆಯಲ್ಲಿ ಆಹಾರದ ಪೌಷ್ಟಿಕತೆಯು ಪ್ರಮುಖ ಪಾತ್ರ ವಹಿಸುತ್ತದೆ ಎಂದು ಜಗತ್ತಿನಾದ್ಯಂತ ತಜ್ಞರು ಒಪ್ಪಿಕೊಂಡಿದ್ದಾರೆ. ನಾವು ಹುಟ್ಟುವುದಕ್ಕಿಂತ ಮೊದಲು, ಅಂದರೆ ಗರ್ಭಾವಸ್ಥೆಯಿಂದ ಬದುಕು ಕೊನೆಗೊಳ್ಳುವ ವರೆಗೆ ಪ್ರತಿಯೊಂದು ಹಂತದಲ್ಲಿಯೂ ಪೌಷ್ಟಿಕತೆಯು ಮುಖ್ಯವಾಗುತ್ತದೆ. ಗರ್ಭಾವಸ್ಥೆ, ಶೈಶವ, ಯೌವನ ಅಥವ ವಯಸ್ಕ, ಹಂತ ಯಾವುದೇ ಇರಲಿ, ಪೌಷ್ಟಿಕತೆ ಅತಿ ಮುಖ್ಯ. ಮೆದುಳಿನ ಸಂಪೂರ್ಣ ವಿಕಾಸಕ್ಕೆ ಹಲವಾರು ವರ್ಷಗಳೇ ಬೇಕಾಗುತ್ತವೆ. ಜೀವನದ ಮೊದಲ ಇಪ್ಪತ್ತೊಂದು ವರ್ಷಗಳಲ್ಲಿ ಮೆದುಳಿನ ಭೌತಿಕ ಬೆಳವಣಿಗೆ ಪೂರ್ಣಗೊಳ್ಳುತ್ತದೆಯಾದರೂ ಬೌದ್ಧಿಕ ಕೌಶಲ್ಯಗಳು ಸಂಪೂರ್ಣವಾಗಿ ವಿಕಾಸವಾಗಲು ಇನ್ನೂ ಹಲವಾರು ವರ್ಷಗಳು ಬೇಕಾಗುತ್ತವೆ.

ಆಹಾರದ ಉತ್ಪಾದನೆ, ಅದರ ವಿತರಣೆಯ ಬಗ್ಗೆ ವಿಚಾರ ಮಾಡುವಾಗ ಮೊದಲು ನಾವು ಗಮನಿಸಬೇಕಾಗಿರುವುದು ಆಹಾರದ ಪೌಷ್ಟಿಕತೆ. ನಾವು ತಿನ್ನುವ ಆಹಾರವು ನಮ್ಮ ಮೆದುಳಿನ ಮೇಲೂ ಪರಿಣಾಮ ಬೀರುತ್ತದೆ. ಹಲವಾರು ದಶಕಗಳಿಂದ ನಾವು ಸಿಹಿ ಮತ್ತು ಕೊಬ್ಬುಭರಿತ ಆಹಾರಗಳ ಅತಿಬಳಕೆಗೆ ತುತ್ತಾಗಿದ್ದೇವೆ. ಇಂತಹ ಆಹಾರವನ್ನು ನಮ್ಮ ದೇಹ ಸ್ವೀಕರಿಸಲು ಸಿದ್ಧವಿರುವುದಿಲ್ಲ. ಇಂತಹ ಆಹಾರದಿಂದ ದೈಹಿಕ ಬೆಳವಣಿಗೆಯ ಜೊತೆಗೆ ಮಾನಸಿಕ ಆರೋಗ್ಯವೂ ಹದಗೆಡುತ್ತದೆ.

**ಬೌದ್ಧಿಕ ಬೆಳವಣಿಗೆಯಲ್ಲಿ ಪೋಷಕಾಂಶಗಳ ಪಾತ್ರ**

ಪೌಷ್ಟಿಕತೆಯ ಕೊರತೆಯಿಂದ ಮೆದುಳು ಸಂಕುಚಿತವಾಗುತ್ತದೆ ಎಂದು ಸಂಶೋಧನೆಗಳ ಮೂಲಕ ವಿದಿತವಾಗಿದೆ. ಇದರಿಂದ ಬುದ್ಧಿಯ ಬೆಳವಣಿಗೆ ಏರುಪೇರಾಗುತ್ತದೆ. ಗರ್ಭಾವಸ್ಥೆಯಲ್ಲಿರುವಾಗ ತಾಯಿಯ ದೇಹದಿಂದ ಮಗುವಿನ ಮೆದುಳಿನ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳು ದೊರೆಯುತ್ತವೆ. ಹೀಗಾಗಿ ಮಗುವಿನ ಮೆದುಳಿನ ಬೆಳವಣಿಗೆಗೆ ಅದಕ್ಕೆ ಗರ್ಭಾವಸ್ಥೆಯಲ್ಲಿರುವಾಗಲೇ ಉತ್ತಮ ಪೋಷಕಾಂಶ ದೊರೆಯಬೇಕಾಗುತ್ತದೆ. ಆದುದರಿಂದ ಗರ್ಭಿಣಿಯು ಉತ್ತಮ ಸತ್ವಭರಿತ ಆಹಾರವನ್ನು ಸೇವಿಸಬೇಕಾಗುತ್ತದೆ. ಪೋಷಕಾಂಶಗಳ ಕೊರತೆಯಿಂದ ಬಳಲುತ್ತಿರುವ ಹತ್ತು ತಿಂಗಳ ಮಗುವಿಗೆ ಹೆಚ್ಚಿನ ಪ್ರೋಟೀನ್ ಯುಕ್ತ ಉತ್ತಮ ಆಹಾರವನ್ನು ನೀಡುವುದರಿಂದ ಮೆದುಳಿನ ಬೆಳವಣಿಗೆಯನ್ನು ಪುನಃ ಸರಿ ಮಾಡಬಹುದು ಎಂದು ಸಂಶೋಧನೆಗಳ ಮೂಲಕ ವಿಜ್ಞಾನಿಗಳು ತೋರಿಸಿಕೊಟ್ಟಿದ್ದಾರೆ. ಅದರ ಜೊತೆಗೆ ಒಳ್ಳೆಯ ಕೊಬ್ಬು ಕೂಡ ಮೆದುಳಿನ ಮರುಬೆಳವಣಿಗೆಗೆ ಸಹಾಯ ಮಾಡುತ್ತದೆ ಎಂದು ತಿಳಿದು ಬಂದಿದೆ. ವಿಟಮಿನ್ ಮತ್ತು ಮಿನರಲ್ ಗಳೂ ಕೂಡ ಸಮತೋಲನ ಆಹಾರದ ಪ್ರಮುಖ ಭಾಗವಾಗಿದ್ದು ಬುದ್ಧಿಶಕ್ತಿಯ ಬೆಳವಣಿಗೆಯಲ್ಲಿ ಇವುಗಳ ಪಾತ್ರ ಹಿರಿದಾಗಿದೆ.

**ಸಮಸ್ಯೆಯ ಗಂಭೀರತೆ**

ಪೋಷಕಾಂಶಗಳ ಕೊರತೆ ಮಕ್ಕಳ ಮೇಲೆ ಮಾತ್ರ ಪರಿಣಾಮ ಬೀರುತ್ತದೆಯೆಂದು ತಿಳಿಯಬಾರದು. ಕಳೆದ ಹದಿನೈದು ವರ್ಷಗಳಲ್ಲಿ ನಡೆದ ಸಂಶೋಧನೆಗಳಿಂದ ಮೃತ್ಯುದರವು ಗಮನಾರ್ಹವಾಗಿ ಏರಿಕೆಯಾಗಿರುವುದು ಕಂಡುಬರುತ್ತದೆ. ಹೃದಯ, ಮಧುಮೇಹ, ಮೂತ್ರಪಿಂಡ ಮತ್ತು ಕ್ಯಾನ್ಸರ್ ಮುಂತಾದ ಕಾಯಿಲೆಗಳು ಏಕಾಏಕಿ ಕಾಣಿಸಿಕೊಳ್ಳುವುದಿಲ್ಲ. ಹಲವಾರು ವರ್ಷಗಳಿಂದ ಪೋಷಕಾಂಶಗಳ ವಿಷಯದಲ್ಲಿ ನಾವು ಮಾಡಿದ ತಪ್ಪುಗಳು ಇಂತಹ ಕಾಯಿಲೆಗಳ ರೂಪದಲ್ಲಿ ಕಾಣಿಸಿಕೊಳ್ಳುತ್ತವೆ. ಕ್ಯಾನ್ಸರ್ಕಾಯಿಲೆ ಮಾನವಕೃತ ಎಂದು ಇಂದಿನ ಅನೇಕ ವಿಜ್ಞಾನಿಗಳು ಹೇಳುತ್ತಿದ್ದಾರೆ. ನಮ್ಮ ಆಹಾರದಲ್ಲಿ, ಅದರಲ್ಲಿಯೂ ಸಿದ್ಧ ಆಹಾರ, ಮೊದಲೇ ಬೇಯಿಸಿದ ಆಹಾರ, ಪ್ಯಾಕ್ ಮಾಡಿದ ಆಹಾರ, ಸಂಸ್ಕರಿತ ಆಹಾರಗಳಲ್ಲಿ ಅವುಗಳ ಸಂರಕ್ಷಣೆಗಾಗಿ ಬಳಸುವ ಕೃತಕ ರಾಸಾಯನಿಕಗಳು ಕ್ಯಾನ್ಸರ್ ಕಾಯಿಲೆಯ ಅಪಾಯವನ್ನು ಹೆಚ್ಚಿಸಿವೆ.

**ಹಸಿರು ಕ್ರಾಂತಿ ಒಡ್ಡಿದ ಸಮಸ್ಯೆಗಳು**

ನಾವು ಉತ್ಪಾದಿಸುವ ಒಟ್ಟು ಆಹಾರದ ನಾಲ್ಕನೇ ಒಂದು ಭಾಗದಷ್ಟು ಮಾತ್ರ ನಾವು ಬಳಸಿಕೊಳ್ಳುತ್ತಿದ್ದೇವೆ. ನಮ್ಮ ಒಟ್ಟು ಉತ್ಪಾದನೆಗೆ ಹೋಲಿಸಿದರೆ ಇದು ಅತ್ಯಂತ ಕಡಿಮೆ. ಈ ಹೆಚ್ಚುವರಿ ಉತ್ಪಾದನೆಯ ಎಲ್ಲ ಶ್ರೇಯಸ್ಸು ಹಸಿರು ಕ್ರಾಂತಿಗೆ ಸಲ್ಲಬೇಕು. ಇಷ್ಟಿದ್ದರೂ ದೇಶದ ಅನೇಕ ಪ್ರದೇಶಗಳ, ವಲಯಗಳ ಜನಸಂಖ್ಯೆಯ ಅತಿದೊಡ್ಡ ಭಾಗ ಅಪೌಷ್ಟಿಕತೆಯಿಂದ ನರಳುತ್ತಿದೆ. ಇದಕ್ಕೆ ಕಾರಣವೇನು?



ಈ ಒಗಟನ್ನು ಈ ರೀತಿಯಾಗಿ ಉತ್ತರಿಸಬಹುದು. ಉತ್ಪಾದನೆಯ ಒಟ್ಟು ಪ್ರಮಾಣ ನಮ್ಮ ಅಗತ್ಯಕ್ಕಿಂತ ಹೆಚ್ಚಾಗಿರುವುದಾದರೂ ನಮಗೆ ಬೇಕಾಗಿರುವ ಎಲ್ಲ ಆಹಾರ ವಸ್ತುಗಳೂ ಸಾಕಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗುತ್ತಿಲ್ಲ. ಕೆಲವು ವಸ್ತುಗಳನ್ನು ಹೆಚ್ಚು ಉತ್ಪಾದಿಸುತ್ತಿದ್ದೇವೆ, ಕೆಲವು ವಸ್ತುಗಳನ್ನು ಕಡಿಮೆ ಉತ್ಪಾದನೆ ಮಾಡುತ್ತಿದ್ದೇವೆ. ಹೆಚ್ಚು ಉತ್ಪಾದನೆ ಎಂದ ಕೂಡಲೆ ಅಂತಹ ವಸ್ತುಗಳ ಬೆಲೆ ಕಡಿಮೆಯಾಗುತ್ತದೆ, ಪರಿಣಾಮ, ಜನರು ಅವುಗಳನ್ನು ಹೆಚ್ಚು ಬಳಸುತ್ತಾರೆ. ಕಡಿಮೆ ಉತ್ಪಾದನೆಯಾಗುವ ವಸ್ತುಗಳು ದುಬಾರಿಯಾಗುವುದರಿಂದ ಜನರು ಅವುಗಳನ್ನು ಬಳಸುವುದಿಲ್ಲ. ಹೀಗಾಗಿ, ನಾವು ನಮ್ಮ ದೀರ್ಘಕಾಲದ ಆರೋಗ್ಯಕರ ಬದುಕಿಗೆ ಸಹಾಯ ಮಾಡುವ ಸಮತೋಲಿತ ಆಹಾರವನ್ನು ಸೇವಿಸುತ್ತಿಲ್ಲ. ಲ್ಯಾನ್ಸೆಟ್ ಆಯೋಗವು ನಡೆಸಿದ ಅಧ್ಯಯನದಿಂದ ಭಾರತವೂ ಸೇರಿದಂತೆ ದಕ್ಷಿಣ ಏಷ್ಯಾದ ಜನರು ಶಿಫಾರಸು ಮಾಡಿದ ಮಟ್ಟಕ್ಕಿಂತ ಹೆಚ್ಚಾಗಿ ಶರ್ಕರಪಿಷ್ಟಯುಕ್ತ ಆಹಾರ ಮತ್ತು ತರಕಾರಿಗಳನ್ನು ಬಳಸುವುದರಿಂದ ಪೋಷಕಾಂಶಗಳ ಕೊರತೆಯಿಂದ ಬಳಲುತ್ತಿದ್ದಾರೆ ಎಂದು ತಿಳಿದು ಬಂದಿದೆ.

ಹಸಿರು ಕ್ರಾಂತಿಯಿಂದ ದೇಶಕ್ಕೆ ಒಳಿತಾಗಿರುವುದು ನಿಜವಾದರೂ ಗಮನಿಸಲೇ ಬೇಕಾದ ಕೆಲವು ಪ್ರಶ್ನೆಗಳೂ ನಮ್ಮ ಮುಂದಿವೆ. ಹಸಿರು ಕ್ರಾಂತಿಯ ಕಾರಣದಿಂದ ನಾವು ನಮ್ಮ ದೇಶದಲ್ಲಿ ಗೋಧಿ, ಅಕ್ಕಿ, ಮುಂತಾದ ಶರ್ಕರಪಿಷ್ಟಯುಕ್ತ ಆಹಾರ ಧಾನ್ಯಗಳನ್ನು ಹೆಚ್ಚಾಗಿ ಬೆಳೆಯುತ್ತಿರುವುದರಿಂದ ಅವನ್ನೇ ಹೆಚ್ಚಾಗಿ ಬಳಸುತ್ತೇವೆ. ಆದುದರಿಂದ, ಇದೀಗ ನಾವು ದಿನನಿತ್ಯ ಬಳಸುವ ಆಹಾರದ ಗುಣ ಮಟ್ಟವನ್ನು ಹೆಚ್ಚಿಸುವ ವಿಚಾರದತ್ತ ನಮ್ಮ ಗಮನವನ್ನು ಹರಿಸಬೇಕಾಗಿದೆ.

ಭಾರತದ ಮೂರನೆಯ ಒಂದು ಭಾಗದಷ್ಟು ಜನರು ಸಸ್ಯಾಹಾರಿಗಳಾಗಿದ್ದಾರೆ. ಸಸ್ಯಾಹಾರಿಗಳು ಇಂತಿಷ್ಟೇ ಪ್ರಮಾಣದ ಶರ್ಕರ ಪಿಷ್ಟ, ಪ್ರೊಟೀನ್, ಕೊಬ್ಬು, ಮುಂತಾದ ಆಹಾರವನ್ನು ಸೇವಿಸಬೇಕೆಂಬ ಆಹಾರದ ಪಟ್ಟಿಯಿದೆ. ಇದರಲ್ಲಿಯೂ ಒಗ್ಗುವ ಮತ್ತು ಒಗ್ಗದಿರುವ ಆಹಾರ ಪದಾರ್ಥಗಳಿವೆ. ಸಸ್ಯಾಹಾರಿಗಳಿಗೆ ಶಿಫಾರಸು ಮಾಡಲಾಗಿರುವ ಆಹಾರ ಪಟ್ಟಿಯನ್ನು ನೋಡಿದಾಗ ಹಾಲು ಮತ್ತು ಕೆಲವು ಹಣ್ಣುಗಳು ನನಗೆ ಒಗ್ಗದ ಆಹಾರ ಎಂದು ಆಯುರ್ವೇದವು ನೆನಪಿಸುತ್ತದೆ. ಆದರೆ ಭಾರತದಲ್ಲಿ ಇಂದು ಅತ್ಯಂತ ಜನಪ್ರಿಯವಾಗಿರುವ ಪೇಯ- ಮಿಲ್ಕ್ ಶೇಕ್. ಈ ಹಿನ್ನೆಲೆಯಲ್ಲಿ ನಮ್ಮ ಕೆಲವು ಅಭ್ಯಾಸಗಳನ್ನು ಪುನರ್ವಿಮರ್ಶಿಸುವ ಅಗತ್ಯವೂ ಇದೆ. ನಮಗೆ ಒಗ್ಗದಿರುವ ಆಹಾರ ಪದಾರ್ಥಗಳನ್ನೂ ಗಮನದಲ್ಲಿರಿಸಿಕೊಂಡು ಹೊಸ ಆಹಾರ ಪಟ್ಟಿಯನ್ನು ಶಿಫಾರಸು ಮಾಡಬೇಕಾಗಿದೆ.

ಇಂದು ನಾವು ಹಸಿರು ಕ್ರಾಂತಿಯ ಭಾಗವಾಗಿ ರಾಸಾಯನಿಕ ಗೊಬ್ಬರಗಳನ್ನು, ಕ್ರಿಮಿನಾಶಕಗಳನ್ನು ಬಳಸಿ ಅಪಾರ ಪ್ರಮಾಣದ ಬೆಳೆ ತೆಗೆಯುತ್ತಿದ್ದೇವೆ. ಇದರಿಂದ ಎರಡು ರೀತಿಯ ಅಪಾಯ ಉಂಟಾಗಿದೆ. ಒಂದು: ನಮ್ಮ ಆಹಾರದಲ್ಲಿ ವಿಪರೀತ ಪ್ರಮಾಣದ ರಾಸಾಯನಿಕಗಳು ಸೇರಿಕೊಂಡಿವೆ. ಇನ್ನೊಂದು: ಕಿರುಧಾನ್ಯಗಳ ಬಳಕೆಯ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ನಮ್ಮ ತಟ್ಟೆಯಿಂದ ಕಿರುಧಾನ್ಯಗಳು ಕ್ರಮೇಣ ಮರೆಯಾಗುತ್ತಿವೆ. ಈ ಹಿನ್ನೆಲೆಯಲ್ಲಿ ಅದಮ್ಯ ಚೇತನ ಸಂಸ್ಥೆಯು ಪ್ರಾರಂಭಿಸಿರುವ ಸಾತ್ವಿಕ ಪೌಷ್ಟಿಕ ಆಹಾರ ಅಭಿಯಾನವು ಒಂದು ಮಹತ್ವದ ಹೆಜ್ಜೆಯಾಗಿದೆ. ಇದನ್ನು ಎಲ್ಲರೂ ಪ್ರೋತ್ಸಾಹಿಸಬೇಕು.


**ಆಹಾರ ಕ್ರಾಂತಿಯ ಅಗತ್ಯ**

ಹಸಿರು ಕ್ರಾಂತಿ ಮತ್ತು ಶ್ವೇತ ಕ್ರಾಂತಿಯಲ್ಲಿ ಒಂದು ಸಮಾನ ಅಂಶವೇನೆಂದರೆ ಜನಸಾಮಾನ್ಯರು ಕೇವಲ ಪ್ರೇಕ್ಷಕರು ಮತ್ತು ಬಳಕೆದಾರರಾಗಿ ಉಳಿದುಕೊಂಡರು. ಆದರೆ "ಆಹಾರ ಕ್ರಾಂತಿ: ಉತ್ತಮ ಆಹಾರ, ಉತ್ತಮ ವಿಚಾರ" ಆಂದೋಲನದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಭಾಗವಹಿಸಬೇಕು. ಈ ಆಂದೋಲನವು ಜನಸಾಮಾನ್ಯನಿಗೆ, ಅವನ ಕುಟುಂಬಕ್ಕೆ ಮತ್ತು ಸಂಪೂರ್ಣ ಸಮಾಜಕ್ಕೆ ಅಗತ್ಯವಾಗಿದೆ. ಇದರ ಅಂತಿಮ ಉದ್ದೇಶ, ಕೃಷಿಕ್ಷೇತ್ರದ ಉತ್ಪಾದನೆ ಮತ್ತು ಬಳಕೆಯಲ್ಲಿರುವ ಅಸಮತೋಲನವನ್ನು ನಿವಾರಿಸುವುದಾಗಿದೆ. ನಾವು ಪೌಷ್ಟಿಕತೆಯ ಸಮಸ್ಯೆಯ ಎಲ್ಲ ಆಯಾಮಗಳ ಮೇಲೆ ಗಮನ ಹರಿಸಿ ಮಕ್ಕಳ ಬೌದ್ಧಿಕ ಮತ್ತು ಶೈಕ್ಷಣಿಕ ಉನ್ನತಿಯನ್ನು ಸಾಧಿಸುವ ಮೂಲಕ

ಪುಟ 5 ರಲ್ಲಿ ಮುಂದುವರೆದಿದೆ

# ಪ್ರವಾಸೋದ್ಯಮದ ಹಿನ್ನೆಲೆಯಲ್ಲಿ ಸಾಂಸ್ಕೃತಿಕ ವೈಭವ

ಪುಟ 1 ರಿಂದ



ಅಂದಿನ ಪ್ರಧಾನಮಂತ್ರಿ, ಶ್ರೀ ಅಟಲ್ ಬಿಹಾರಿ ವಾಜಪೇಯಿಯವರು ಶಿಲಾನ್ಯಾಸ ನೆರವೇರಿಸಿದರು. ಲಡಾಖ್ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಜಗತ್ತಿನ ಅತ್ಯಂತ ಎತ್ತರದ ವಿಮಾನ ನಿಲ್ದಾಣವನ್ನು ಉನ್ನತ ದರ್ಜೆಗೆ ಏರಿಸಲಾಯಿತು. ಜೊತೆಗೆ ಲಡಾಖ್ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಅನುಕೂಲಕ್ಕಾಗಿ ಮೂಲ ಸೌಕರ್ಯಗಳನ್ನು ಉತ್ತಮಪಡಿಸುವ ಕೆಲಸವೂ ಪ್ರಾರಂಭವಾಯಿತು. ಪರಿಣಾಮವಾಗಿ, ಇಂದು ಲಡಾಖ್ ಪ್ರದೇಶಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗಿದೆ. ಇವೆಲ್ಲದರ ಹಿಂದಿನ ಪ್ರೇರಕ ಶಕ್ತಿ ಅನಂತಕುಮಾರ್. ಸಿಂಧೂ ದರ್ಶನ ಉತ್ಸವವು ಮುಂದೆ ಬ್ರಹ್ಮಪುತ್ರ ನದಿ ದರ್ಶನ ಉತ್ಸವದ ಪ್ರಾರಂಭಕ್ಕೆ ಮಾದರಿಯಾಯಿತು.

**ಪುಣ್ಯಪುರುಷರ ಸ್ಮರಣೆ**

ಸಂಸ್ಕೃತಿ ಇಲಾಖೆಯಲ್ಲಿ ಅನಂತಕುಮಾರರ ಕಾರ್ಯಕಾಲವೇ ಭಾರತವು ಗಣರಾಜ್ಯವೆಂದು ಘೋಷಿಸಿಕೊಂಡ ಐವತ್ತನೆಯ ವರ್ಷವಾಗಿದ್ದುದು ಒಂದು ದಿವ್ಯ ಸಂಯೋಗವೆನ್ನಬಹುದು. ಗಣರಾಜ್ಯದ ಸುವರ್ಣ ಮಹೋತ್ಸವವು ಅನಂತಕುಮಾರರಿಗೆ ಉತ್ತಮ ಅವಕಾಶಗಳನ್ನು ಒದಗಿಸಿತು. ಅವರು ಹಲವಾರು ಮಹಾನ್ ಸಂತರ ಮತ್ತು ದೇಶಕ್ಕಾಗಿ ದುಡಿದ ಮಹಾಪುರುಷರ ಜನ್ಮ ಶತಮಾನೋತ್ಸವಗಳನ್ನು ಸಂಭ್ರಮ ಸಡಗರಗಳಿಂದ ಆಚರಿಸುವ ವ್ಯವಸ್ಥೆ ಮಾಡಿದರು. ಸಿಖ್ ಧರ್ಮಗುರು, ಗುರು ಗೋಬಿಂದ ಸಿಂಗರು 1699 ರಲ್ಲಿ ಸ್ಥಾಪಿಸಿದ ಖಾಲ್ಸಾ ಪಂಥದ ಮುನ್ನೂರು ವರ್ಷ ಮತ್ತು ಮಹಾವೀರ ತೀರ್ಥಂಕರರ 2600 ವರ್ಷದ ಸಂದರ್ಭಗಳನ್ನು ಸ್ಮರಣೀಯವಾಗಿ ಆಚರಿಸಲಾಗಿತ್ತು.

**ಕಲೆ ಮತ್ತು ಸಂಸ್ಕೃತಿ**

ದೇಶದ ಹಲವಾರು ಪ್ರಸಿದ್ಧ ಸಾಧಕರನ್ನು ಸೇರಿಸಿಕೊಂಡು ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ(IGNCA)ದ ನಿರ್ದೇಶಕ ಮಂಡಳಿಯನ್ನು ಪುನಾರಚನೆ ಮಾಡಿದರು. ಭಾರತದ ಸ್ವಾತಂತ್ರ್ಯದ ಸುವರ್ಣಮಹೋತ್ಸವದ ದೇಶದ ಅಂಗವಾಗಿ ಮೊತ್ತಮೊದಲ ರಾಷ್ಟ್ರೀಯ ನಾಟಕೋತ್ಸವವನ್ನು "ಭಾರತ ರಂಗ ಮಹೋತ್ಸವ" ಎಂಬ ಹೆಸರಿನಲ್ಲಿ ನಡೆಸಲಾಯಿತು. ಇದರಲ್ಲಿ ದೇಶದ ಪ್ರತಿಯೊಂದು ಭಾಗದಿಂದ ಆಗಮಿಸಿದ 70 ನಾಟಕ ತಂಡಗಳು ಭಾಗವಹಿಸಿದ್ದುದು ವಿಶೇಷವಾಗಿತ್ತು.

ಅನಂತಕುಮಾರರ ಕಾಲದಲ್ಲಿ ಸಾಂಸ್ಕೃತಿಕ ವಿನಿಮಯಕ್ಕಾಗಿ 76 ದೇಶಗಳ ಜೊತೆಗೆ ಒಪ್ಪಂದಗಳನ್ನು ಮಾಡಿಕೊಳ್ಳಲಾಯಿತು. ಕಾಂಬೋಡಿಯ ಮತ್ತು ಕ್ರೋವೇಶಿಯ ದೇಶಗಳ ಜೊತೆ ಸಾಂಸ್ಕೃತಿಕ ಸಹಕಾರ ಕಾರ್ಯಕ್ರಮಗಳನ್ನು ಪ್ರಪ್ರಥಮ ಬಾರಿಗೆ ಹಮ್ಮಿಕೊಳ್ಳಲಾಯಿತು.

ದೇಶದ ಸಂಸ್ಕೃತಿಯನ್ನು ಸಾರುವ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಮತ್ತು ಪ್ರಚಾರ, ಅವರು ಕೈಗೆತ್ತಿಕೊಂಡ ಇನ್ನೊಂದು ಮಹತ್ಕಾರ್ಯ. ಭಾರತದ ಪುರಾತತ್ವ ಇಲಾಖೆ ಸುಮಾರು 500 ಕ್ಕೂ ಹೆಚ್ಚು ಸ್ಮಾರಕಗಳ ಸಂರಕ್ಷಣೆ, ರಾಸಾಯನಿಕ ಸುರಕ್ಷೆ ಮತ್ತು ಸ್ಮಾರಕಗಳ ಸುತ್ತ ಸುಂದರ ಉದ್ಯಾನಗಳ ನಿರ್ಮಾಣ ಮುಂತಾದ ಹಲವಾರು ಕಾರ್ಯಗಳನ್ನು ಅತ್ಯಲ್ಪ ಕಾಲದಲ್ಲಿಯೇ ಕೈಗೆತ್ತಿಕೊಂಡಿತು. ರಾಖಿಗರ್ಹಿ, ಗುಲ್ಬರ್ಗ, ಹಂಪಿ, ಪುರಾನಾ ಕಿಲಾ, ಕುರುಕ್ಷೇತ್ರ ಮುಂತಾದ ಐತಿಹಾಸಿಕ ಸ್ಥಳಗಳಲ್ಲಿ ನಡೆದ ಉತ್ಖನನ ಕಾರ್ಯಗಳಿಂದ ಭಾರತದ ಇತಿಹಾಸದ ನಕ್ಷೆಯೇ ಬದಲಾಯಿತು. ಇದೇ ಸಂದರ್ಭದಲ್ಲಿ ಮಹಾಭಾರತದ ವಿವಿಧ ಘಟನೆಗಳನ್ನು ಚಿತ್ರಗಳ ಮೂಲಕ ಬಿಂಬಿಸುವ 34 ಅಡಿ ಎತ್ತರದ ನಾಲ್ಕುನೂರು ಅಡಿ ಅಗಲದ ವೃತ್ತಾಕಾರದ ವಿಶಿಷ್ಟವಾದ ರಚನೆಯನ್ನು ಕುರುಕ್ಷೇತ್ರದಲ್ಲಿ ನಿರ್ಮಾಣ ಮಾಡಲಾಗಿದ್ದು ಇಂದಿಗೂ ಪ್ರೇಕ್ಷಕರನ್ನು ಸೆಳೆಯುತ್ತಿದೆ.

ಭಾರತದ ಪ್ರತಿಭಾವಂತ ಕಲಾವಿದರಾದ ರವೀಂದ್ರನಾಥ ಟಾಗೋರ್, ನಂದಲಾಲ್ ಬೋಸ್, ಅಮೃತಾ ಶೇರ್ಗಿಲ್, ನಿಕೋಲಾಯ್ ರೋರಿಚ್ ಮೊದಲಾದ ಒಂಬತ್ತು ಕಲಾವಿದರ ಕಲಾಕೃತಿಗಳನ್ನು ಅಂಕೀಕರಣ (digitise) ಮಾಡುವ ಕೆಲಸ ಪ್ರಾರಂಭವಾಯಿತು. ಅದೇರೀತಿ, ಪರಂಪರೆಯ ತಾಣಗಳಾದ ಹಂಪಿ, ತಾಜಮಹಲ್, ಖಜುರಾಹೋ, ಕೋನಾರ್ಕ್, ಸೋಮನಾಥ ಮುಂತಾದ ಪ್ರಮುಖ ಸ್ಥಳಗಳ ವಾಸ್ತವ ಅನುಭವವನ್ನು ನೀಡುವ ಅಡಕ ಮುದ್ರಿಕೆಗಳನ್ನು ತಯಾರಿಸಲಾಯಿತು. ಇದೇ ಕಾಲದಲ್ಲಿ ದೇಶದಲ್ಲಿ ಲಭ್ಯವಿರುವ ಎಲ್ಲ ಪ್ರಾಚೀನ ಅವಶೇಷಗಳ ಪಟ್ಟಿಯನ್ನು ಅಡಕಮುದ್ರೆಯಲ್ಲಿ ತಯಾರಿಸುವ ಕೆಲಸವೂ ಆರಂಭವಾಯಿತು.

**ಪ್ರವಾಸೋದ್ಯಮದ ಬೆಳವಣಿಗೆ ಮತ್ತು ಮಾಹಿತಿ ತಂತ್ರಜ್ಞಾನ**

ಈ ಎಲ್ಲ ಕಾರ್ಯಕ್ರಮಗಳಿಂದ ಭಾರತವನ್ನು ವಿಶ್ವಾದ್ಯಂತ ಪರ್ಯಟಕರು ಕುತೂಹಲದಿಂದ ಗಮನಿಸುವಂತಾಯಿತು. ಭಾರತಕ್ಕೆ ವಿದೇಶೀ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಯಿತು. ದೇಶವಿದೇಶಗಳ ಪ್ರವಾಸಿಗರಿಗೆ ಮೂಲ ಸೌಕರ್ಯಗಳನ್ನು ಕಲ್ಪಿಸುವುದು ಅಗತ್ಯವಾಯಿತು. ಪ್ರವಾಸೋದ್ಯಮ ಇಲಾಖೆಯು ಸ್ವಾಗತ, ಆತಿಥ್ಯ, ಮಾಹಿತಿ, ಸುರಕ್ಷತೆ, ಮೂಲಭೂತ ಸೌಕರ್ಯ ಅಭಿವೃದ್ಧಿ ಮತ್ತು ಸಾರ್ವಜನಿಕ/ಖಾಸಗಿ ಸಹಯೋಗ - ಈ ಆರು ಅಂಶಗಳನ್ನೊಳಗೊಂಡ ಪ್ರವಾಸೋದ್ಯಮ ನೀತಿಯನ್ನು ರೂಪಿಸಿತು. ಪರಿಣಾಮವಾಗಿ ಟಾಟಾ, ಭಾರತೀಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಐಟಿಸಿಎಲ್ ಮುಂತಾದ ಸಂಸ್ಥೆಗಳು ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವ ಮಹತ್ಕಾರ್ಯದಲ್ಲಿ ಕೈಜೋಡಿಸಿದವು.

ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯಲ್ಲಿ ಮಾಹಿತಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡ ಕೀರ್ತಿ ಅನಂತಕುಮಾರ್ ಅವರಿಗೆ ಸಲ್ಲಬೇಕು ಈ ಮೊದಲು ಹೇಳಿದ ಕಲಾಕೃತಿಗಳ ಅಂಕೀಕರಣ ಯೋಜನೆಯ ಜೊತೆಗೆ ಪ್ರವಾಸಿಗರಿಗೆ ಮಾಹಿತಿಯನ್ನು ನೀಡುವ ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಯಿತು. ದಿಲ್ಲಿಯ ಕೆಂಪುಕೋಟೆಯ ವಾಸ್ತವ ಮಾಹಿತಿ ಪಡೆಯಲು ಗಣಕೀಕೃತ ವಿದ್ಯುನ್ಮಾನ ಮಾರ್ಗದರ್ಶಿ ವ್ಯವಸ್ಥೆ, ಪ್ರಯಾಣಿಕರು ದೆಹಲಿ ವಿಮಾನ ನಿಲ್ದಾಣದಲ್ಲಿ ಇಳಿಯುತ್ತಿದ್ದಂತೆಯೇ ಹೋಟೆಲ್ ಕೋಣೆಗಳನ್ನು ಕಾಯ್ದಿರಿಸಲು ಮತ್ತು ಇತರ ಮಾಹಿತಿಗಳನ್ನು ನೀಡಲು 34 ಸ್ಪರ್ಶಪರದೆ ಯಾಂತ್ರಿಕಮುಂಗಟ್ಟೆಗಳ ಸ್ಥಾಪನೆ, ಕುತುಬ್ ಮಿನಾರನ್ನು ಹತ್ತದೆಯೇ ಅದರ ವೈಭವದ ವಾಸ್ತವ (virtual) ಅನುಭವವನ್ನು ನೀಡುವ ವ್ಯವಸ್ಥೆ ಮುಂತಾದ ಹತ್ತು ಹಲವು ವಿನೂತನ ಉಪಕ್ರಮಗಳನ್ನು ಅನಂತಕುಮಾರ ಕಾರ್ಯಕಾಲದಲ್ಲಿ ಪ್ರಾರಂಭಿಸಲಾಯಿತು.

ಪ್ರವಾಸಿಗರ ಅನುಕೂಲಕ್ಕಾಗಿ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು 77 ಕೋಟಿ ರೂಪಾಯಿ ವೆಚ್ಚದ 337 ಯೋಜನೆಗಳನ್ನು ಅವರು ಸಿದ್ಧಪಡಿಸಿದ್ದರು. ಪ್ರವಾಸಿ ಏಜೆಂಟರು ಪ್ರವಾಸ ಆಯೋಜಕರು ಮತ್ತು ಸಾರಿಗೆ ವ್ಯವಸ್ಥೆಗೆ ಅನುಮತಿ ನೀಡುವ ನಿಯಮಗಳನ್ನು ಸರಳಗೊಳಿಸಿದರು. ಈ ಎಲ್ಲ ಉಪಕ್ರಮಗಳು ದೇಶದ ಸಾಂಸ್ಕೃತಿಕ ಹಿರಿಮೆಯನ್ನು ಜಗತ್ತಿಗೆ ಪರಿಚಯಿಸಿ ಪ್ರವಾಸಿಗರನ್ನು ಭಾರತದತ್ತ ಸೆಳೆಯುವಲ್ಲಿ ಯಶಸ್ವಿಯಾದವು. ಅನಂತಕುಮಾರರ ಕಾಲದಲ್ಲಿ ಪ್ರವಾಸೋದ್ಯಮ ಕ್ಷೇತ್ರದಲ್ಲಿ 40 ಲಕ್ಷ ಹೊಸ ಉದ್ಯೋಗಗಳು ಸೃಷ್ಟಿಯಾಗಿರುವುದು ಒಂದು ವಿಶಿಷ್ಟ ದಾಖಲೆಯಾಗಿದೆ. ಆ ವರ್ಷ ಪ್ರವಾಸೋದ್ಯಮದಿಂದಲೇ 14000 ಕೋಟಿ ರೂಪಾಯಿಗಳಿಗೂ ಮಿಗಿಲಾದ ವರಮಾನವನ್ನು ನಮ್ಮ ದೇಶ ಗಳಿಸಿತು. ಇವೆಲ್ಲ ಸಾಧ್ಯವಾಗುವ ಕಾಲದಲ್ಲಿ ದೇಶವು ಕಾರ್ಗಿಲ್ ಯುದ್ಧ, ಗುಜರಾತಿನ ಭೂಕಂಪ ಮತ್ತು ಒರಿಸ್ಸಾ ರಾಜ್ಯದ ಭೀಕರ ಪ್ರವಾಹ ಮುಂತಾದ ಕಠಿಣ ಪರಿಸ್ಥಿತಿಗಳನ್ನು ಎದುರಿಸುತ್ತಿತ್ತು ಎಂಬುದನ್ನು ಮರೆಯಬಾರದು.

ಸ್ಪಷ್ಟ ಕಲ್ಪನೆ, ಸಂಕಲ್ಪಶಕ್ತಿ, ಕ್ರಿಯಾಶೀಲತೆಗಳ ಜೊತೆಗೆ ಸಮನ್ವಯ ಭಾವದಿಂದ ಕೆಲಸ ಮಾಡಿದರೆ ಯಾವುದೂ ಅಸಾಧ್ಯವಲ್ಲ ಎಂದು ಅನಂತಕುಮಾರರ ಸಾಧನೆ ತೋರಿಸುತ್ತದೆ. ಪ್ರತಿದಿನವೂ ಪ್ರತಿಕ್ಷಣವೂ ಕ್ರಿಯಾಶೀಲರಾಗಿರುವ ಜನರು ತಮಗೆಷ್ಟು ಅವಧಿ ನೀಡಲಾಗಿದೆ ಎಂದು ಪರಿಗಣಿಸುವುದಿಲ್ಲ. ತಮ್ಮೆದುರಿಗಿರುವ ಸವಾಲುಗಳನ್ನು ನೇರವಾಗಿ ಸ್ವೀಕರಿಸಿ ಮುನ್ನುಗ್ಗುತ್ತಾರೆ. ಒಂದು ಕ್ಷಣವನ್ನೂ ವ್ಯರ್ಥಮಾಡದೆ ಯಶೋಮಾರ್ಗದ ಮೆಟ್ಟಿಲುಗಳನ್ನು ಏರುತ್ತಾರೆ ಎಂಬುದಕ್ಕೆ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಇಲಾಖೆಯ ಸಚಿವರಾಗಿ ಎಂಟೂವರೆ ತಿಂಗಳ ಅವಧಿಯಲ್ಲಿ ಅನಂತಕುಮಾರ್ ಮಾಡಿದ ಸಾಧನೆಗಳೇ ಸಾಕ್ಷಿ.





# ಸಮಾಜಮುಖಿ ಕೆಲಸಗಳಲ್ಲಿ ವಿದ್ಯಾರ್ಥಿಗಳ ಪಾತ್ರ

**ಲಕ್ಷಾಂತರ ಜನರು ಹಸಿವೆ ಮತ್ತು ಅಜ್ಞಾನಗಳಿಂದ ಬದುಕುತ್ತಿರುವವರೆಗೆ, ಅವರ ಪರಿಶ್ರಮಗಳ ಫಲದಿಂದ ಶಿಕ್ಷಿತರಾಗಿಯೂ ಅವರ ಕಡೆ ಕನಿಷ್ಟ ಗಮನವನ್ನೂ ಹರಿಸದ ಪ್ರತಿಯೊಬ್ಬ ವ್ಯಕ್ತಿಯನ್ನೂ ನಾನು ದ್ರೋಹಿ ಎಂದೇ ಪರಿಗಣಿಸುತ್ತೇನೆ.**

"ಇದು ವೀರ ಸನ್ಯಾಸಿ ವಿವೇಕಾನಂದರ ಮಾತು. ಅವರದೇ ಇನ್ನೊಂದು ಮಾತು, ಇತರರಿಗಾಗಿ ಬದುಕುವವರು ಮಾತ್ರ ಜೀವಂತವಿರುವವರು, ಉಳಿದವರು ಬದುಕಿರುವವರಿಗಿಂತ ಹೆಚ್ಚು ನಿರ್ಜೀವಿಗಳು"

ವಿವೇಕಾನಂದರ ಈ ವಿಚಾರಧಾರೆಯನ್ನು ಆಧಾರವಾಗಿಟ್ಟುಕೊಂಡು ದೇಶದ ವಿದ್ಯಾರ್ಥಿಸಮುದಾಯವನ್ನು ರಾಷ್ಟ್ರನಿರ್ಮಾಣದಲ್ಲಿ ತೊಡಗಿಸುವ ಒಂದು ಸಂಘಟನೆ, ವಿದ್ಯಾರ್ಥಿ ಪರಿಷತ್ತು. ಅದರಲ್ಲಿ ಸುಮಾರು 16 ವರ್ಷ ಕೆಲಸ ಮಾಡುವ ಅವಕಾಶ ನನ್ನ ಜೀವನದಲ್ಲಿ ನನಗೆ ಒದಗಿ ಬಂದಿತು. ವಿಶೇಷವಾಗಿ 10, 12ನೇ ತರಗತಿಗಳಿಗೆ ಮೇಲ್ಪಟ್ಟ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆಗೆ ಬಹಳ ನಿಕಟವಾಗಿ ಕೆಲಸ ಮಾಡುವ ಅವಕಾಶ ಸಿಕ್ಕಿದ ಆ ಸಂದರ್ಭದಲ್ಲಿ ನಾನು ಸಾವಿರಾರು ಜನ ವಿದ್ಯಾರ್ಥಿಗಳನ್ನು ಭೇಟಿಯಾಗಿದ್ದೇನೆ. ಇಂದಿನ ವಿದ್ಯಾರ್ಥಿಗಳಿಗೆ ದೇಶಭಕ್ತಿಯ ಕೊರತೆಯಿದೆ, ಸಂಪ್ರದಾಯಗಳ ಬಗ್ಗೆ ಗೌರವವಿಲ್ಲ ಹಾಗೂ ಅವರಲ್ಲಿ ಯಾವುದೇ ರೀತಿಯ ಸಾರ್ವಜನಿಕ ಹಿತಾಸಕ್ತಿ ಇಲ್ಲ, ಎಲ್ಲರೂ ಬೇಜವಾಬ್ದಾರಿಯ ಯುವಕರು ಎಂಬ ಸಾಮಾನ್ಯವಾದ ಭಾವನೆಯು ಇಂದು ಸಮಾಜದಲ್ಲಿ ನೆಲೆಯಾಗಿದೆ. ನನ್ನ ಜೀವನದ ಅನುಭವದಿಂದ ಇದು ಸುಳ್ಳು ಎಂದು ನನಗೆ ಅರಿವಾಗಿದೆ. ಯುವಕರಿಗೆ ಸಕಾಲದಲ್ಲಿ ಪ್ರೇರಣೆ ಮತ್ತು ಸೂಕ್ತವಾದ ಮಾರ್ಗದರ್ಶನ ಸಿಕ್ಕಿದರೆ ಅವರು ರಚನಾತ್ಮಕ ಕಾರ್ಯಗಳಲ್ಲಿ, ಸಮಾಜ ಮತ್ತು ದೇಶಹಿತದ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಾರೆ ಎಂಬುದು ನನ್ನ ವಿಶ್ವಾಸ.

ಅದಕ್ಕೆ ಇತ್ತೀಚಿನ ಒಂದೆರಡು ಉದಾಹರಣೆಗಳನ್ನು ಇಲ್ಲಿ ನೀಡಬಹುದು. ಇತ್ತೀಚೆಗೆ ವಿದ್ಯಾರ್ಥಿಪರಿಷತ್ತಿನ ಹಳೆಯ ಕಾರ್ಯಕರ್ತರು "ಸ್ಕೂಲ್ ಬೆಲ್" ಎನ್ನುವ ಒಂದು ಕಾರ್ಯಕ್ರಮವನ್ನು ಶುರುಮಾಡಿದರು. ರಾಜ್ಯದ ಕೆಲವು ಸರ್ಕಾರಿ ಶಾಲೆಗಳನ್ನು ಆಯ್ಕೆ ಮಾಡಿಕೊಂಡು ಆ ಶಾಲೆಗಳ ದುಸ್ಥಿತಿಯ ಬಗ್ಗೆ ವಿವರಣೆ ಪಡೆದುಕೊಂಡು ಒಂದೊಂದು ಊರಿನ ಒಂದೊಂದು ಶಾಲೆಗೆ ಸುಣ್ಣ ಬಣ್ಣ ಮಾಡಿಸುವುದು ಮಾತ್ರವಲ್ಲ, ಅಗತ್ಯ ಪರಿಕರಗಳನ್ನೂ ಜೋಡಿಸಿ ಕೊಡುವುದು ಈ ಕಾರ್ಯಕ್ರಮದ ಉದ್ದೇಶ. ಸುಮಾರು ಐವತ್ತು ಅರವತ್ತು ಜನರು ತಮ್ಮೊಂದಿಗೆ ಕಲಾವಿದರನ್ನು ಕರೆದುಕೊಂಡು ಹೋಗಿ ನಾಲ್ಕೈದು ದಿನಗಳ ಕಾಲ ಆಯಾ ಊರುಗಳಲ್ಲೇ ಮೊಕ್ಕಾಂ ಮಾಡಿ, ಚಿತ್ರಗಳನ್ನು ಬರೆಸಿ, ಇಡೀ ಶಾಲೆಯ ರೂಪವನ್ನೇ ಬದಲಾಯಿಸಿ ಬಿಟ್ಟಿದ್ದಾರೆ. ಈ ರೀತಿಯಾಗಿ, ಸುಮಾರು 150 ಶಾಲೆಗಳಲ್ಲಿ ಸುಮಾರು 10000 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಸ್ವಪ್ರೇರಣೆಯಿಂದ ಯಾವುದೇ ರೀತಿಯ ಅಪೇಕ್ಷೆ, ಪ್ರಚಾರ, ಪ್ರಸಿದ್ಧಿಗಳನ್ನು ಅಪೇಕ್ಷಿಸದೆ ಕೆಲಸ ಮಾಡಿದ್ದಾರೆ. ಅದೇ ರೀತಿ, ಲಾಕ್ಡೌನ್ ಸಂದರ್ಭದಲ್ಲಿಯೂ ಈ "ಸ್ಕೂಲ್ ಬೆಲ್" ನಲ್ಲಿ ಇನ್ನೊಂದು ಕರೆಕೊಟ್ಟರು. "ನಿಮ್ಮ ಆಸುಪಾಸಿನಲ್ಲಿ ಇರುವ ಕನಿಷ್ಟ ಹತ್ತು ವಿದ್ಯಾರ್ಥಿಗಳಿಗೆ ನೀವು ಪಾಠ ಮಾಡಿರಿ, ಲಾಕ್ಡೌನ್ ಸಂದರ್ಭದಲ್ಲಿ ಅವರಿಗೆ ಪಾಠಗಳ ಕೊರತೆಯಾಗಿದೆ" ಎಂದು ಕರೆ ನೀಡಿದಾಗ ಸುಮಾರು 5000 ವಿದ್ಯಾರ್ಥಿಗಳು ಆನ್ಲೈನ್ ನೋಂದಣಿ ಮಾಡಿಕೊಂಡಿದ್ದಾರೆ. ಇವರೆಲ್ಲ ಹಳೆವಿದ್ಯಾರ್ಥಿಗಳು. ಈ ರೀತಿಯಾಗಿ ಅವರಿಗೆ ದೀಕ್ಷೆ ಕೊಟ್ಟರೆ, ಪ್ರೇರಣೆ ನೀಡಿದರೆ, ಸೂಕ್ತ ನಿರ್ದೇಶನ ನೀಡಿದರೆ ಸಾವಿರಾರು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಸ್ಪಂದಿಸುವುದು ನಮ್ಮ ಅನುಭವಕ್ಕೆ ಬಂದಿದೆ.

ಇತ್ತೀಚೆಗೆ ನಮ್ಮ ವಿದ್ಯಾರ್ಥಿಗಳಿಗೆ ಸಮಾಜದ ನಿಜದರ್ಶನವಾಗಬೇಕು, ಗ್ರಾಮದರ್ಶನವಾಗಬೇಕು ಎಂಬ ಉದ್ದೇಶದಿಂದ "ಅನುಭೂತಿ" ಎಂಬ ಹೆಸರಿನಲ್ಲಿ ಒಂದು ಕಾರ್ಯಕ್ರಮ ಮಾಡಿದರು. ಪಟ್ಟಣಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಸಾಮಾನ್ಯವಾಗಿ ಗ್ರಾಮವನ್ನು ನೋಡಿರುವುದೇ ಇಲ್ಲ. ಗ್ರಾಮವಾಸದ ಬಗ್ಗೆ ಅವರಿಗೆ ಏನೇನೂ ಗೊತ್ತಿರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಹಳ್ಳಿಗಳಿಗೆ ತೆರಳಿ, ಹಳ್ಳಿಗರ ಮನೆಗಳಲ್ಲಿಯೇ ಎರಡು ಮೂರು ದಿನ ವಾಸ ಮಾಡಿ, ಅವರ ಕೆಲಸಕಾರ್ಯಗಳಲ್ಲಿ ಕೈಜೋಡಿಸಿ, ಹಳ್ಳಿಗಳ ಬಗ್ಗೆ ಅರಿವು ಪಡೆದುಕೊಳ್ಳಬೇಕು. ಈ ಕಾರ್ಯಕ್ರಮದಲ್ಲಿಯೂ ದೇಶಾದ್ಯಂತ ಸುಮಾರು ಒಂದು ಲಕ್ಷಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅವರ ಅನುಭವಗಳು ರೋಚಕವಾಗಿವೆ. ಪ್ರತಿಯೊಬ್ಬರೂ ಒಂದೊಂದು ವಿಭಿನ್ನ ಅನುಭವವನ್ನು ಹೇಳಿಕೊಂಡಿದ್ದಾರೆ. ಈ ರೀತಿಯಾಗಿ, ಒಂದು ಕರೆಕೊಟ್ಟಾಗ ಅಪಾರ ಸಂಖ್ಯೆಯಲ್ಲಿ ಹುಡುಗರು ಸ್ಪಂದಿಸುವುದನ್ನು ನೋಡಿದರೆ ವಿದ್ಯಾರ್ಥಿಗಳಲ್ಲಿ ಸಮಾಜಸೇವೆಯ ತುಡಿತವಿಲ್ಲ, ಅವರಿಗೆ ಹೊಣೆಗಾರಿಕೆಯಿಲ್ಲ ಎಂಬ ಮಾತುಗಳು ಸತ್ಯದೂರವಾಗಿ ಕಾಣಿಸುತ್ತವೆ.

ಯುವಕರಿಗೆ ಸಮಾಜದಲ್ಲಿ ನಾವು ಅವಕಾಶವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಈ ದಿಸೆಯಲ್ಲಿ ಅನೇಕ ಸಂಘಟನೆಗಳು ಕಾರ್ಯನಿರತವಾಗಿವೆ. "ಬೆಂಗಳೂರು ಯೂತ್ ಫಾರ್ ಸೇವಾ" ಅಂಥದೊಂದು ಸಂಘಟನೆ. ಸಣ್ಣ ಮಟ್ಟದಲ್ಲಿ ಪ್ರಾರಂಭವಾದ ಈ ಸಂಘಟನೆ ಇಂದು ದೇಶಾದ್ಯಂತ ವ್ಯಾಪಿಸಿ ಲಕ್ಷಾಂತರ ಯುವಕರನ್ನು ಆಕರ್ಷಿಸಿದೆ. ಈ ಸಂಘಟನೆಯ ಪ್ರೇರಣೆಯಿಂದಾಗಿಯೇ "ಡಾಕ್ಟರ್ ಫಾರ್ ಸೇವಾ, ಇಂಜಿನಿಯರ್ಸ್ ಫಾರ್ ಸೇವಾ, ಟೀಚರ್ಸ್ ಫಾರ್ ಸೇವಾ" ಮುಂತಾದ ಹೆಸರುಗಳಲ್ಲಿ ಸಂಘಟಿತರಾಗಿ ಲಕ್ಷಾಂತರ ಜನರು ಕೆಲಸ ಮಾಡುತ್ತಿದ್ದಾರೆ. ನಮ್ಮ "ಸ್ವಾಮಿ ವಿವೇಕಾನಂದ ಮೂವ್ಮೆಂಟ್" ಕೂಡ ಇಂತಹದೇ ಒಂದು ಸಂಸ್ಥೆ. ಸ್ವಾಮಿ ವಿವೇಕಾನಂದರ ಪ್ರೇರಣೆಯಿಂದ ಕೆಲಸ ಮಾಡುತ್ತಿರುವ ಈ ಸಂಸ್ಥೆಯು ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಕೆಲಸವನ್ನು ಮಾಡುತ್ತಿದೆ.



**ಜಿ.ಆರ್. ಜಗದೀಶ್**
ಕ್ಷೇತ್ರೀಯ ಸಹಸಂಘಟನಾ ಕಾರ್ಯದರ್ಶಿ, ವಿದ್ಯಾಭಾರತಿ

ಈ ರೀತಿಯಾಗಿ, ಸೂಕ್ತ ಪರಿಸರವನ್ನು ಒದಗಿಸಿಕೊಟ್ಟರೆ ನಮ್ಮ ವಿದ್ಯಾರ್ಥಿಗಳು ತಮ್ಮನ್ನು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಾರೆ ಎನ್ನುವುದು ನಿರ್ವಿವಾದ. ನಮ್ಮ ವಿದ್ಯಾರ್ಥಿಗಳು ತಮ್ಮ ರಾಷ್ಟ್ರ ಕಟ್ಟುವ ಕೆಲಸದಲ್ಲಿ ಖಂಡಿತ ನೆರವಾಗುತ್ತಾರೆ, ಅವರು ನಿರುಪಯೋಗಿಗಳಲ್ಲ, ಅವರು ತಮ್ಮ ಯೌವನವನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿಕೊಂಡು ಸಾರ್ಥಕ ಜೀವನವನ್ನು ನಡೆಸುತ್ತಾರೆ ಎಂಬ ಭರವಸೆ ನಮಗಿದೆ. (ಸೌಜನ್ಯ: ಆಕಾಶವಾಣಿ, ಮೈಸೂರು)

## ಆಹಾರ ಕ್ರಾಂತಿ: ಉತ್ತಮ ಆಹಾರ, ಉತ್ತಮ ವಿಚಾರ

ಪುಟ 3 ರಿಂದ ವಿದ್ವಾನ್ ಭಾರತವನ್ನು ನಿರ್ಮಾಣ ಮಾಡಲು ಪ್ರಯತ್ನಿಸುತ್ತಿದ್ದೇವೆ. ದೈನಂದಿನ ಬದುಕಿನಲ್ಲಿ ಸಮತೋಲನ ಆಹಾರವನ್ನು ಬಳಸುವುದರಿಂದ ಆಯುರ್ಮಾನವೃದ್ಧಿಯಾಗಿ ಭಾರತವು ಆಯುಷ್ಮಾನ್ ಭಾರತವೂ ಆಗುತ್ತದೆ.

ಸಮತೋಲನ ಆಹಾರ, ಒಗ್ಗದಿರುವ ಆಹಾರದ ತಿಳುವಳಿಕೆಗಳನ್ನು ಆಯುರ್ವೇದ ಜ್ಞಾನದಿಂದ ಪಡೆಯುವ ಮೂಲಕ ಭಾರತವು ಸ್ವಸ್ಥ ಭಾರತವಾಗುತ್ತದೆ ಎಂದೂ ನಾವು ನಿರೀಕ್ಷಿಸಬಹುದು. ಬಳಕೆದಾರರ ಅಗತ್ಯಗಳನ್ನು ಪೂರೈಸಲು ಸರಕಾರಗಳು, ಸಂಶೋಧನಾ ಸಂಸ್ಥೆಗಳು ಜೊತೆಗೂಡಿ, ತೋಟಗಾರಿಕೆಯ ಮೌಲ್ಯವರ್ಧನೆ ಮಾಡುವ ಮೂಲಕ ಹಾಗೂ ಕಿರುಧಾನ್ಯಗಳಿಗೆ ಸಿಗಬೇಕಾಗಿದ್ದ ಮಹತ್ವವನ್ನು ನೀಡುವ ಮೂಲಕ ಇಳುವರಿ ಅಧಿಕಗೊಂಡು ಕೃಷಿಪ್ರಧಾನ ಭಾರತದ ರೈತರ ಜೀವನ ಹಸನಾಗುತ್ತದೆ. ದೇಶೀಯ ಆಹಾರದ ಸಂಸ್ಕರಣಾ ಘಟಕಗಳಿಗೆ ಉತ್ತೇಜನ ದೊರೆತು, ರಫ್ತು ಅವಕಾಶಗಳು ಅಧಿಕಗೊಂಡು ಭಾರತವು ಸಮೃದ್ಧವೂ ಆಗುವುದರಲ್ಲಿ ಸಂಶಯವಿಲ್ಲ. ಈ ನಿಟ್ಟಿನಲ್ಲಿ ಕಿರುಧಾನ್ಯಗಳ ಯುಕ್ತ ಬಳಕೆಯಿಂದ ಪೌಷ್ಟಿಕ ಆಹಾರದ ಕೊರತೆಯನ್ನು ನೀಗಿಸುವುದರ ಜೊತೆಗೆ ಆಮದು ವೆಚ್ಚವನ್ನೂ ತಗ್ಗಿಸಿ ಮೇಕ್ಇನ್ ಇಂಡಿಯಾಯೋಜನೆಯ ಯಶಸ್ಸಿಗೂ ಕೊಡುಗೆ ನೀಡಬಹುದು. ಅಭಿವೃದ್ಧಿಶೀಲ ದೇಶಗಳಿಗೆ ಕೃಷಿಯಾಧಾರಿತ ಅಭಿವೃದ್ಧಿಯ ಒಂದು ಹೊಸ ಮೇಲ್ಪಂಕ್ತಿಯನ್ನು ಹಾಕಿಕೊಡುವ ಮೂಲಕ ವಿಶ್ವಗುರು ಭಾರತದ ಕಲ್ಪನೆಯೂ ಸಾಕಾರವಾಗುವುದು ಸಾಧ್ಯ .

# ಸೂಕ್ಷ್ಮಜೀವಿ ಪ್ರಪಂಚ ಮತ್ತು ನಮ್ಮ ಆಹಾರ ಪದ್ಧತಿ

ಡಾ. ರಶ್ಮಿ ಕುಲಕರ್ಣಿ
ಆಹಾರ ವಿಜ್ಞಾನ ಸಂಶೋಧಕರು



ಜನಸಾಮಾನ್ಯರಲ್ಲಿ ಪೋಷಕಾಂಶಗಳ ಕುರಿತು ಅರಿವು ಮೂಡಿಸುವುದು ಆಹಾರ ಕ್ರಾಂತಿಯ ಪ್ರಮುಖ ಉದ್ದೇಶವಾಗಿದೆ. ಈ ದಿಸೆಯಲ್ಲಿ ನಮ್ಮ ಪೋಷಕಾಂಶಗಳ ಮೇಲೆ ಪರಿಣಾಮ ಬೀರುವ ಇತರ ಅಂಶಗಳ ಕುರಿತು ಜನರಲ್ಲಿ ಅರಿವು ಮೂಡಿಸುವುದು ಇಂದಿನ ಅಗತ್ಯವಾಗಿದೆ.

ನಾವು ಸೇವಿಸಿದ ಆಹಾರ ಮುಂದೇನಾಗುತ್ತದೆ ಎಂಬ ಕುರಿತು ಯೋಚಿಸೋಣ. ಸಾಮಾನ್ಯವಾಗಿ ನಮಗೆ ಕಾಣಿಸುತ್ತಿರುವ ನಮ್ಮ ಅಂಗಾಂಗಗಳೇ "ನಾವು" ಎಂದು ತಿಳಿಯುತ್ತೇವೆ. ಇದು ನಿಜವಲ್ಲ. ಕಣ್ಣಿಗೆ ಕಾಣಿಸದಿರುವ ಕೋಟ್ಯಂತರ ಸೂಕ್ಷ್ಮಜೀವಿಗಳು ಈ ದೇಹದಲ್ಲಿರುತ್ತವೆ. ದೇಹದಲ್ಲಿ ನಮ್ಮದೇ ಜೀವಕೋಶಗಳ ಸಂಖ್ಯೆಯ ಹತ್ತು ಪಟ್ಟು ಅಧಿಕ ಸಂಖ್ಯೆಯ ಜೀವಕೋಶಗಳನ್ನು ಈ ದೇಹದಲ್ಲಿ ವಾಸಿಸುವ ಸೂಕ್ಷ್ಮಜೀವಿಗಳು ಹೊಂದಿರುತ್ತವೆ. ಈ ಸೂಕ್ಷ್ಮಜೀವಿಗಳೂ ಕೂಡ ನಮ್ಮ ಅರಿವಿಗೆ ನಿಲುಕದ ಅನೇಕ ಉಪಯುಕ್ತ ಕೆಲಸಗಳನ್ನು ಮಾಡುತ್ತಿರುತ್ತವೆ. ಇವೆಲ್ಲವನ್ನೂ ಒಟ್ಟಿಗೆ ಸೇರಿಸಿಯೇ "ಪರಿಪೂರ್ಣ ಮಾನವ" ಎಂದು ಪರಿಗಣಿಸಬೇಕಾಗುತ್ತದೆ. ಈ ಸೂಕ್ಷ್ಮಜೀವಿಗಳ ಬಗ್ಗೆ ಜನರು ನಿಜವಾದ ಜ್ಞಾನವನ್ನು ಹೊಂದುವುದು ಅತ್ಯಗತ್ಯ.

**ಸೂಕ್ಷ್ಮಜೀವಿ ಪ್ರಪಂಚ**

ನಮ್ಮ ದೇಹದಲ್ಲಿ ಪರಸ್ಪರ ಸಹಕಾರದಿಂದ ನೆಲೆಸಿರುವ ಬ್ಯಾಕ್ಟೀರಿಯಾ, ವೈರಾಣುಗಳು, ಪ್ರೋಟೋಜೋವಾ, ಬೂಸ್ಟು (fungus)ಗಳೇ ಮುಂತಾದ ಎಲ್ಲ ಸೂಕ್ಷ್ಮಜೀವಿಗಳನ್ನೂ ಒಟ್ಟಾಗಿ "ಸೂಕ್ಷ್ಮಜೀವಿ ಪ್ರಪಂಚ" ಎಂದು ಕರೆಯಬಹುದು. ಬೆರಳಿನ ಮುದ್ರೆಗಳಂತೆ ಈ ಸೂಕ್ಷ್ಮಜೀವಿ ಪ್ರಪಂಚವು ಪ್ರತಿಯೊಬ್ಬರಿಗೂ ವಿಶಿಷ್ಟವಾಗಿರುತ್ತವೆ. ವ್ಯಕ್ತಿಯ ಹುಟ್ಟಿನಿಂದ ಆರಂಭಿಸಿ ಮುಂದೆ ಎಲ್ಲ ಹಂತಗಳಲ್ಲಿ ಅವನು ಸೇವಿಸಿದ ಆಹಾರ, ಬದುಕಿದ ವಾತಾವರಣ, ಸಂಪೂರ್ಣ ಬದುಕಿನ ಒಟ್ಟು ಅನುಭವಗಳ ಆಧಾರದಲ್ಲಿ ಈ ಸೂಕ್ಷ್ಮಜೀವಿ ಪ್ರಪಂಚವು ಅಸ್ತಿತ್ವದಲ್ಲಿರುತ್ತದೆ. ನಮ್ಮ ದೇಹದಲ್ಲಿ ಇದುವರೆಗೆ ವಿವಿಧ ತಳಿಗಳ ಸುಮಾರು ಹತ್ತುಸಾವಿರ ಸೂಕ್ಷ್ಮಜೀವಿಗಳನ್ನು ಗುರುತಿಸಲಾಗಿದೆ. ನಮ್ಮದೇ ವಂಶವಾಹಿಗಳ ಸಂಖ್ಯೆಯ ನೂರು ಪಟ್ಟು ಹೆಚ್ಚಿನ ವಂಶವಾಹಿಗಳನ್ನು ಈ ಸೂಕ್ಷ್ಮಜೀವಿಗಳಲ್ಲಿ ಗುರುತಿಸಲಾಗಿದೆ. ನಮ್ಮನ್ನು ಇತರ ವ್ಯಕ್ತಿಗಳಿಂದ ಪ್ರತ್ಯೇಕಿಸುವ ಅಂಶಗಳಲ್ಲಿ ಸೂಕ್ಷ್ಮಜೀವಿ ಪ್ರಪಂಚವೂ ಒಂದು. ನಮ್ಮದೇ ವಂಶವಾಹಿಗಳು ಮಾತ್ರವಲ್ಲ, ನಮ್ಮ ದೇಹದಲ್ಲಿರುವ ಒಟ್ಟು ಸೂಕ್ಷ್ಮಜೀವಿಗಳೂ ಕೂಡ ನಮ್ಮ ಪ್ರತ್ಯೇಕ ಲಕ್ಷಣಗಳಿಗೆ ಕಾರಣವಾಗಿರುತ್ತವೆ. ನಮ್ಮ ದೇಹದ ಶೇ. 10 ಭಾಗವನ್ನು ಮಾತ್ರ ನಾವು ಪ್ರತಿನಿಧಿಸುತ್ತೇವೆ, ಉಳಿದ ಶೇ. 90 ಭಾಗವನ್ನು ಸೂಕ್ಷ್ಮಜೀವಿಗಳು ಆಕ್ರಮಿಸಿಕೊಂಡಿವೆ. ಅದೇ ರೀತಿ, ನಮ್ಮ ದೇಹದ ಒಟ್ಟು ಕರ್ತವ್ಯಗಳ ಶೇ. ಒಂದು ಭಾಗವನ್ನು ಮಾತ್ರ ನಾವು ನಿರ್ವಹಿಸಿದರೆ ಉಳಿದ ಶೇ. 99 ಭಾಗ ಕೆಲಸಗಳನ್ನು ಸೂಕ್ಷ್ಮಜೀವಿಗಳು ನಡೆಸುತ್ತವೆ.

ನಮ್ಮ ಹುಟ್ಟಿನೊಡನೆ ನಮಗೆ ಸೂಕ್ಷ್ಮಜೀವಿ ಪ್ರಪಂಚದ ಪರಿಚಯವಾಗುತ್ತದೆ. ಹುಟ್ಟುವ ಮೊದಲು, ಹುಟ್ಟಿದ ನಂತರ ಬೆಳವಣಿಗೆಯ ಹಂತಗಳಲ್ಲಿ ಯಾವ ಆಹಾರವನ್ನು ಸೇವಿಸುತ್ತೇವೆ, ಯಾವ ವಾತಾವರಣದಲ್ಲಿ ಬದುಕುತ್ತೇವೆ ಎಂಬುದರ ಆಧಾರದಲ್ಲಿ ನಮ್ಮ ದೇಹವನ್ನು ಸೇರಿಕೊಳ್ಳುವ ಸೂಕ್ಷ್ಮಜೀವಿಗಳು ನಮ್ಮ ರೋಗಪ್ರತಿರೋಧ ವ್ಯವಸ್ಥೆಯನ್ನು ನಿರಂತರವಾಗಿ ತರಬೇತು ಮಾಡುತ್ತಿರುತ್ತವೆ. ಇದೇ ತಾನೇ ಹುಟ್ಟಿದ ಮಗುವಿನ ದೇಹದ ಜೀವಕೋಶಗಳಿಗೆ ಯಾವ ರೀತಿಯ ಪ್ರತಿರೋಧ ವ್ಯವಸ್ಥೆ ಬೇಕೆಂಬುದರ ತರಬೇತಿಯನ್ನು ಈ ಸೂಕ್ಷ್ಮಜೀವಿಗಳೇ ನೀಡುತ್ತವೆ. ದೇಹದಲ್ಲಿ ಅದಾಗಲೇ ತರಬೇತಾದ ರೋಗಪ್ರತಿರೋಧ ವ್ಯವಸ್ಥೆ ಇರುವುದರಿಂದ ದೇಹವನ್ನು ಪ್ರವೇಶಿಸಿದ ರೋಗಕಾರಕಗಳು ತಮ್ಮ ವಸಾಹತನ್ನು ಸ್ಥಾಪಿಸಿಕೊಳ್ಳಲು ವಿಫಲವಾಗುತ್ತವೆ.

**ಕರುಳಿನ ಸೂಕ್ಷ್ಮಜೀವಿ ಜಗತ್ತು**

ನಮ್ಮ ಕರುಳಿನಲ್ಲಿರುವ ಸೂಕ್ಷ್ಮಜೀವಿ ಜಗತ್ತನ್ನೇ ಗಮನಿಸೋಣ. ಕರುಳಿನಲ್ಲಿರುವ ಈ ಜೀವಿಗಳು ಸುಮಾರು ಒಂದರಿಂದ ಒಂದೂವರೆ ಕಿಲೋಗ್ರಾಂ ತೂಗುತ್ತವೆ. ಈ ಕರುಳಿನ ಸೂಕ್ಷ್ಮಜೀವಿ ಜಗತ್ತಿನ ಅಧ್ಯಯನ ಮಾಡಿರುವ ವಿಜ್ಞಾನಿಗಳು ಇದರ ಪ್ರಾಮುಖ್ಯತೆಯನ್ನು ದಾಖಲಿಸಿದ್ದಾರೆ. ಈ ಸೂಕ್ಷ್ಮಜೀವಿ ಜಗತ್ತು ಅರೋಗ್ಯಕರವಾಗಿದ್ದರೆ ದೀರ್ಘಕಾಲದ ಹೃದಯ ಸಂಬಂಧಿ ಕಾಯಿಲೆಗಳು, ರಕ್ತದ ಏರೊತ್ತಡ, ಅನೇಕ ಬಗೆಯ ಕ್ಯಾನ್ಸರ್ ಗಳು. ಮಾನಸಿಕ ಕಾಯಿಲೆಗಳು ಮುಂತಾದ ಅನೇಕ ಕಾಯಿಲೆಗಳು ನಮ್ಮನ್ನು ಬಾಧಿಸುವುದಿಲ್ಲ. ಈ ಸೂಕ್ಷ್ಮಜೀವಿ ಜಗತ್ತು ಎಷ್ಟು ಮಹತ್ವದ್ದಾಗಿದೆಯೆಂದರೆ, ಇಂದು ಅದನ್ನು ಮಾನವ ದೇಹದ ಒಂದು ಅಂಗ ಎಂದೇ ಘೋಷಣೆ ಮಾಡಬೇಕೆಂಬ ಬೇಡಿಕೆ ಬಲವಾಗಿ ಕೇಳಿಸುತ್ತಿದೆ.

ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯು ವಿವಿಧ ಬಗೆಯ ವ್ಯಂಜನಗಳನ್ನೊಳಗೊಂಡಿದೆ. ಈ ರೀತಿಯ ವೈವಿಧ್ಯವು ದೇಹದಲ್ಲಿ ಸೂಕ್ಷ್ಮಜೀವಿಗಳ ವೈವಿಧ್ಯಕ್ಕೂ ಕಾರಣವಾಗಿದೆ. ಉತ್ತಮ ರೋಗ ಪ್ರತಿರೋಧ ವ್ಯವಸ್ಥೆಗೆ ಮತ್ತು ಉತ್ತಮ ಆರೋಗ್ಯಕ್ಕೆ ಈ ವೈವಿಧ್ಯ ಸಹಕಾರಿಯಾಗಿರುತ್ತದೆ. ಆದರೆ ಪುಟ 6 ರಲ್ಲಿ ಮುಂದುವರೆದಿದೆ

# ಉದಾತ್ತ ಚಿಂತನಾಕ್ರಮ ಮತ್ತು ಕ್ರಿಯಾಶೀಲತೆಗಳ ಸಂಗಮ

ಪುಟ 2 ರಿಂದ ಭಾವನೆ ಬರದಿದ್ದ ಹಾಗೆ ನಡೆದುಕೊಳ್ಳುತ್ತಿದ್ದರು. ನಮ್ಮ ನಡೆಗಳನ್ನು ನಾವೇ ಗಮನಿಸಿ ತಿದ್ದಿಕೊಳ್ಳುವಂತೆ ನಮ್ಮ ಮೇಲೆ ಪ್ರಭಾವ ಬೀರುತ್ತಿದ್ದರು. ಅವರ ಈ ಧೀಮಂತ ಮುಖವನ್ನು ನಾನು ನಮ್ಮ ಶಂಕರ ಕ್ಯಾನ್ಸರ್ ಆಸ್ಪತ್ರೆಯ ನಿರ್ಮಾಣದ ಸಂದರ್ಭದಲ್ಲಿ ನೋಡಿದ್ದೇವೆ. ಅಂದು ಅನಂತಕುಮಾರರು ನಮಗೆ ನೀಡಿದ ಧೈರ್ಯ, ಸಹಕಾರ ಮತ್ತು ಮಾರ್ಗದರ್ಶನಗಳಿಂದಾಗಿ ಆಸ್ಪತ್ರೆ ಇಂದು ಈ ಮಟ್ಟಕ್ಕೆ ಬೆಳೆದು ನಿಂತಿದೆ. ನಮ್ಮೊಳಗಿನ ಚೇತನವಾಗಿ ಪ್ರತಿಯೊಂದು ಹೆಜ್ಜೆಯಲ್ಲಿಯೂ ಕೈಹಿಡಿದು ಮುನ್ನಡೆಸಿದ ಪರಿ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ. ಇಂದು ಅವರು ಬದುಕಿದ್ದಿದ್ದರೆ ಇಂತಹ ಸಂದರ್ಭದಲ್ಲಿ ಏನು ಹೇಳುತ್ತಿದ್ದರು, ಯಾವ ಸಲಹೆ ನೀಡುತ್ತಿದ್ದರು ಎಂದು ಇಂದಿಗೂ ಯೋಚಿಸುವಷ್ಟು ನಮ್ಮ ಮನಸ್ಸನ್ನು ಅವರು ಆವರಿಸಿಕೊಂಡಿದ್ದಾರೆ.

ಯಾವುದೇ ಹಿನ್ನೆಲೆಯ ಒಬ್ಬ ವ್ಯಕ್ತಿಯು ತನ್ನ ಪ್ರತಿಕೂಲ ಪರಿಸ್ಥಿತಿಯಲ್ಲಿ ಇವರ ಸಹಾಯ ಅಥವ ಆಸರೆ ಬೇಕೆಂದು ಕೇಳಿದರೆ ಹಿಂದೆ ಮುಂದೆ ನೋಡದೆ ಸಹಾಯ ಮಾಡಲು ಅವರು ಸಿದ್ಧರಾಗುತ್ತಿದ್ದರು. ಒಂದು ವೈಯಕ್ತಿಕ ದೃಷ್ಟಾಂತವನ್ನು ಇಲ್ಲಿ ಕಾಣಿಸಬಹುದು. ನಮಗೆ ತುಂಬ ಪರಿಚಯವಿರುವ ನಮ್ಮ ಹಳ್ಳಿಯ ವಕೀಲರೊಬ್ಬರ ಮಗಳು ತನ್ನ ಪತಿಯ ಜೊತೆ ಇಂಗ್ಲೆಂಡಿನಲ್ಲಿ ವಾಸ ಮಾಡುತ್ತಿದ್ದಳು. ಯಾವುದೋ ಒಂದು ಅಪಘಾತದಲ್ಲಿ ಅವಳು ತೀರಿಕೊಂಡಳು. ವಿದೇಶದಿಂದ ಮಗಳ ಶವವನ್ನು ಊರಿಗೆ ತರಿಸುವುದು ಹೇಗೆ? ಅದಕ್ಕೆ ಎಷ್ಟು ಸಮಯ ತಗಲಬಹುದು? ಎಷ್ಟು ಹಣ ಬೇಕಾಗಬಹುದು? ಏನು ಮಾಡುವುದೆಂದು ತಿಳಿಯದೆ ಅವರು ಒದ್ದಾಡುತ್ತಿದ್ದರು. ನಾನು ಅನಂತಕುಮಾರರ ಬಳಿ ಅವರ ಪರಿಸ್ಥಿತಿಯನ್ನು ವಿವರಿಸಿದೆ. ಅನಂತಕುಮಾರರು ನನ್ನಿಂದ ಅವರ ಮಗಳ ವಿಳಾಸ ಮತ್ತು ಇತರ ವಿವರಗಳನ್ನು ಪಡೆದುಕೊಂಡರು. ಇಂಗ್ಲೆಂಡಿನ ದೂತಾವಾಸದ ಸಹಾಯದಿಂದ ಕೇವಲ ಎರಡು ದಿನಗಳಲ್ಲಿ ಎಲ್ಲ ವ್ಯವಸ್ಥೆಗಳನ್ನು ಮಾಡಿ ನನ್ನ ಸ್ನೇಹಿತರ ಸಮಸ್ಯೆಗಳನ್ನು ಪರಿಹರಿಸಿದರು. ಅನಂತಕುಮಾರರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ವೈಯಕ್ತಿಕವಾಗಿ ಭೇಟಿಯಾಗಲು ನನ್ನ ಪರಿಚಯದ ವಕೀಲರು ಬಯಸಿದಾಗ ಅನಂತಕುಮಾರರು " ಅವರು ನೊಂದಿದ್ದಾರೆ, ಅವರು ಮೊದಲು ತಮಗಾದ ಆಘಾತದಿಂದ ಚೇತರಿಸಿಕೊಳ್ಳಲಿ, ಅವರಿಗೆ ನಾನೇನೋ ದೊಡ್ಡ ಉಪಕಾರ ಮಾಡಿದೆ ಎಂಬ ಭಾವನೆ ಅವರಲ್ಲಿರಬಾರದು. ಅವರು ನನಗೆ ಧನ್ಯವಾದ ಹೇಳಬಾರದು. ಅವರು ನನ್ನನ್ನು ಭೇಟಿಯಾಗುವುದು ಬೇಡ" ಎಂದು ಹೇಳಿದ್ದರು. ಇದು ಅನಂತಕುಮಾರರ ಸ್ವಭಾವ.

ಬೇರೆಯವರ ಕಷ್ಟಗಳಿಗೆ ಹೇಗೆ ಸ್ಪಂದಿಸಬಹುದು ಎಂದು ಯೋಚಿಸುತ್ತ ಕಷ್ಟದಲ್ಲಿರುವ ಜನರಿಗೆ ಕರುಣೆ ತೋರಿಸುವುದಕ್ಕಿಂತ ಹೆಚ್ಚಾಗಿ ಆತ್ಮಸ್ಥೈರ್ಯ ತುಂಬುವ ರೀತಿಯಲ್ಲಿ ವರ್ತಿಸುತ್ತಿದ್ದರು. ಅವರ ಬೆಂಬಲಕ್ಕೆ ತಾವಿದ್ದೇವೆ ಎಂಬ ಭಾವನೆಯನ್ನು ಅವರಲ್ಲಿ ಉಂಟು ಮಾಡುತ್ತಿದ್ದರು. ತಮ್ಮನ್ನು ವಿರೋಧಿಸುತ್ತಿದ್ದವರಿಗೂ, ಸದಾಕಾಲ ತಮ್ಮನ್ನು ನಿಂದಿಸುತ್ತಿದ್ದವರಿಗೂ ಸಹಾಯ ಮಾಡಿದ ಅನೇಕ ನಿದರ್ಶನಗಳಿವೆ. " ನಮ್ಮ ವಿರೋಧಿಗಳು ಬದಲಾಗಬೇಕು ಎಂದು ನಾವು ಅಪೇಕ್ಷಿಸುವುದಿಲ್ಲ, ನಾವು ನಾವಾಗಿಯೇ ಇರೋಣ, ಒಂದಲ್ಲ ಒಂದು ದಿನ ಅವರು ಬದಲಾಗಬಹುದು, ಬದಲಾಗದಿದ್ದರೇನಂತೆ, ಪ್ರಪಂಚ ಇರುವುದೇ ಹೀಗೆ, ಲೋಕೋ ಭಿನ್ನರುಚಿಃ" ಎಂದು ಅವರು ಹೇಳುತ್ತಿದ್ದರು. ರಾಜಕೀಯಲ್ಲಿ ಇಂತಹ ಮನೋವೃತ್ತಿಯ ಜನರು ಕಾಣಸಿಗುವುದು ಕಷ್ಟ. ಅನಂತಕುಮಾರರು ಕೇವಲ ರಾಜಕೀಯ ನಾಯಕರಾಗಿರಲಿಲ್ಲ. ನಿಜವಾದ ಅರ್ಥದಲ್ಲಿ ಒಬ್ಬ ದೊಡ್ಡ ಮನುಷ್ಯರಾಗಿದ್ದರು.

ಅನಂತಕುಮಾರರು ಎಲ್ಲರನ್ನೂ ಗೌರವ ಮತ್ತು ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದರು. ತಮ್ಮ ಸುತ್ತ ಅನೇಕ ಜನರಿದ್ದಾಗ ತಮ್ಮನ್ನು ಮಾತನಾಡಿಸಲು ಬಂದವರಿಗೆ ಮುಜುಗರವಾಗದಂತೆ ಒಂದೋ ಎರಡೋ ಶಬ್ದಗಳಲ್ಲಿ ಚುಟುಕಾಗಿ ಉತ್ತರಿಸುತ್ತಿದ್ದರು. ಒಮ್ಮೆ ನನ್ನ ವಿಷಯದಲ್ಲಿಯೂ ಹೀಗೆಯೇ ಆಯಿತು. ಅವರೊಂದಿಗೆ ಮಾತು ಪ್ರಾರಂಭಿಸಲು ಹಿಂಜರಿಯುತ್ತಿದ್ದೆ. ನನಗೆ ವೈಯಕ್ತಿವಾದುದಲ್ಲವಾಗಿದ್ದರೂ ಮುಖ್ಯವಾದ ವಿಷಯವಾಗಿದ್ದುದರಿಂದ ನಾನು ಮಾತನಾಡದಿರುವಂತೆಯೂ ಇರಲಿಲ್ಲ. ನನ್ನನ್ನು ನೋಡಿ "ನಿಮ್ಮ ಅಹವಾಲು ಅಂಗೀಕೃತವಾಗಿದೆ" ಎಂದು ಹೇಳಿ ನನ್ನನ್ನು ಮುಜುಗರದಿಂದ ಪಾರು ಮಾಡಿದರು. ಪರಸ್ಪರ ಸಂಬಂಧಗಳ ಸೂಕ್ಷ್ಮತೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಸೂಕ್ತವಾಗಿ ಮಾತನಾಡುವ ಕಲೆಯಿಂದಾಗಿ ಎಲ್ಲರ ಗೌರವಾದರಗಳಿಗೆ ಅವರು ಪಾತ್ರರಾಗಿದ್ದರು.

ಹಣಬಲ ಮತ್ತು ಅಧಿಕಾರ ಬಲಗಳನ್ನು ಬೇರೆಯವರ ಒಳಿತಿಗಾಗಿ ಬಳಸಬೇಕೆಂದು ಅವರು ಹೇಳುತ್ತಿದ್ದರು. ಅಧಿಕಾರದಲ್ಲಿದ್ದಾಗ ವಿನಯಶೀಲರಾಗಿರಬೇಕು, ಅಧಿಕಾರವನ್ನು ನಾವು ನಿಯಂತ್ರಿಸಬೇಕೇ ಹೊರತು ಅಧಿಕಾರವು ನಮ್ಮನ್ನು ನಿಯಂತ್ರಿಸಬಾರದು ಎಂದು ಭಾವಿಸಿದ್ದ ಅವರು ಅದರಂತೆಯೇ ನಡೆದುಕೊಂಡರು. ಸಾರ್ವಜನಿಕರ ಒಳಿತಿಗಾಗಿ ಏನನ್ನು ಬೇಕಾದರೂ ಮಾಡಲು ಸಿದ್ಧರಿದ್ದ ಅನಂತಕುಮಾರರು "ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾಃ" ಎಂಬ ಉಪನಿಷದ್ವಾಕ್ಯದ ಬೆಳಕಿನಲ್ಲಿ ತಮ್ಮ ಜೀವನವನ್ನು ಸಾರ್ಥಕವಾಗಿ ನಡೆಸಿದರು.

ನೆನಪಿನ ಅಂಗಳದಿಂದ

# "ವಿವಾದಕ್ಕೆಡೆಯಿಲ್ಲದ ಪರಿಪೂರ್ಣ ವ್ಯಕ್ತಿತ್ವ"

**ಮುರುಗೇಶ್ ಆರ್. ನಿರಾಣಿ**
**ಗಣಿ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ**

1982 ರಲ್ಲಿ ಎಬಿವಿಪಿ ರಾಜ್ಯ ಕಾರ್ಯದರ್ಶಿಯಾಗಿ ಸಾಮಾಜಿಕ ಜೀವನಕ್ಕೆ ಕಾಲಿಟ್ಟ ಅನಂತಕುಮಾರರು ವಿದ್ಯಾರ್ಥಿ ಹೋರಾಟ, ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಹೋರಾಟ ಸೇರಿದಂತೆ ರಾಷ್ಟ್ರೀಯ ಚಿಂತನೆಯುಳ್ಳ ಪ್ರತಿ ಹೋರಾಟದಲ್ಲೂ ಮುಂಚೂಣಿಯಲ್ಲಿ ಇರುತ್ತಿದ್ದರು. ಅವರು ಅಟಲ್ ಬಿಹಾರಿ ವಾಜಪೇಯಿ ಹಾಗೂ ಲಾಲ್ ಕೃಷ್ಣ ಅಡ್ವಾಣಿಯವರ ಒಡನಾಡಿಯಾಗಿದ್ದವರು. ಪಕ್ಷವು ವಹಿಸಿದ ಎಲ್ಲ ಜವಾಬ್ದಾರಿಗಳನ್ನು ಅತ್ಯಂತ ಸಮರ್ಥವಾಗಿ ನಿಭಾಯಿಸಿದರು. ಪ್ರತಿ ಕೆಲಸದಲ್ಲೂ ಸೃಜನಶೀಲತೆ ಹಾಗೂ ಹೊಸತನ ಬಯಸುತ್ತಿದ್ದ ಅವರು ಅತ್ಯಂತ ಕ್ರಿಯಾಶೀಲ ರಾಜಕಾರಣಿಯಾಗಿದ್ದರು. ಅವರ ಜೀವನಶೈಲಿ ಹಾಗೂ ಅಭಿವೃದ್ಧಿಪರ ಮತ್ತು ದೂರದೃಷ್ಟಿಯುಳ್ಳ ಚಿಂತನೆಗಳು ನಮ್ಮೆಲ್ಲರಿಗೂ ಮಾದರಿಯಾಗಿದೆ.

ನಿರಾಣಿ ಸಕ್ಕರೆ ಕಾರ್ಖಾನೆ ಪ್ರಾರಂಭದ ದಿನಗಳಲ್ಲಿ ಕಾರ್ಖಾನೆಗೆ ಭೇಟಿ ನೀಡಿ ಯುವಕನಾಗಿದ್ದ ನನ್ನ ಪ್ರಯತ್ನಕ್ಕೆ ಪ್ರಶಂಸೆ ವ್ಯಕ್ತಪಡಿಸಿ ರಾಷ್ಟ್ರದ ಅತಿದೊಡ್ಡ ಕಾರ್ಖಾನೆಯಾಗಿ ಬೆಳೆಯಲಿ ಎಂದು ಹಿರಿಯಣ್ಣನಂತೆ ನನಗೆ ಹರಸಿದ್ದು ನನ್ನ ಮನಸ್ಸಿನಲ್ಲಿ ಅಚ್ಚಳಿಯದಂತೆ ಉಳಿದಿದೆ. ಪಕ್ಷದ ಸಂಘಟನೆಗೆ ಎಂದು ಪ್ರತಿಬಾರಿ ಬಾಗಲಕೋಟೆ-ವಿಜಯಪುರ ಜಿಲ್ಲೆಗಳಿಗೆ ಬಂದಾಗ ತಪ್ಪದೆ ನಮ್ಮ ಮನೆಗೆ ಬಂದು ನಮ್ಮ ಆತಿಥ್ಯ ಸ್ವೀಕರಿಸುತ್ತಿದ್ದರಿಂದ ನಮ್ಮ ಮನೆಯಲ್ಲಿ ಒಬ್ಬರಾಗಿ ಬೆರೆತು ಹೋಗಿದ್ದರು.

ಪ್ರತಿ ಬಾರಿ ಭೇಟಿಯಾದಾಗಲೂ ನಿರಾಣಿ ಉದ್ಯಮ ಸಮೂಹದ ಕುರಿತು ಕುತೂಹಲದಿಂದ ನನ್ನೊಡನೆ ಚರ್ಚಿಸಿ ಅಮೂಲ್ಯ ಸಲಹೆ ನೀಡುತ್ತಿದ್ದರು. 2017 ರಲ್ಲಿ ಪರಿವರ್ತನೆ ಯಾತ್ರೆಗೆ ಆಗಮಿಸಿದಾಗ ಭಾಷಣದಲ್ಲಿ ಮುರುಗೇಶ ನಿರಾಣಿ ಅವರದ್ದು ಕೇವಲ ಸಕ್ಕರೆ ಕಾರ್ಖಾನೆ ಮಾತ್ರ ಇಲ್ಲ, ಅವರಲ್ಲಿ ಸಕ್ಕರೆಯಂತಹ ಮನಸ್ಸಿದೆ ಎಂದು ನನ್ನ ಕುರಿತು ಅಭಿಮಾನ ಹಾಗೂ ಪ್ರೀತಿಯಿಂದ ಮಾತನಾಡಿದ್ದರು. ಕಳೆದ ಚುನಾವಣೆಯಲ್ಲಿ ಬೀಳಗಿಗೆ ಆಗಮಿಸಿ ನನ್ನ ಪರವಾಗಿ ಪ್ರಚಾರ ನಡೆಸಿ 'ಬೀಳಗಿಯ ಬೆಳಕು ಮತ್ತೊಮ್ಮೆ ಪ್ರಜ್ವಲಿಸುತ್ತದೆ' ಎಂದು ಹಾರೈಸಿದ್ದು ನನಗೆ ಅತ್ಯಂತ ಹೆಮ್ಮೆಯ ಸಂಗತಿ.

ನಾನು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವನಾಗಿದ್ದಾಗ ಹಲವಾರು ಯೋಜನೆಗಳನ್ನು ಪ್ರಾರಂಭಿಸಲು ನನಗೆ ಮಾರ್ಗದರ್ಶನ ಮಾಡಿದ್ದರು. ಸುಮಾರು 35 ವರ್ಷಕ್ಕೂ ಅಧಿಕ ಸಾರ್ಥಕ ರಾಜಕೀಯ ಜೀವನದಲ್ಲಿ ಯಾರನ್ನೂ ನೋಯಿಸದೆ, ಯಾವುದೇ ವಿವಾದಗಳಿಗೆ ಒಳಗಾಗದೆ ಪ್ರತಿ ಕೆಲಸದಲ್ಲಿ ಪರಿಪೂರ್ಣತೆ ಸಾಧಿಸಿದ ಅದ್ಭುತ ವ್ಯಕ್ತಿ ಅನಂತಕುಮಾರ್. ಪಕ್ಷ ಸಂಘಟನೆಯ ವಿಚಾರದಲ್ಲಿ ಅವರು ಒಬ್ಬ ವ್ಯಕ್ತಿಯಲ್ಲ, ಒಂದು ಶಕ್ತಿಯಾಗಿ ಕೆಲಸ ಮಾಡಿದ್ದಾರೆ. ದಕ್ಷಿಣಭಾರತದಲ್ಲಿ ಕಮಲ ಅರಳುವಲ್ಲಿ ಯಡಿಯೂರಪ್ಪನವರ ಶ್ರಮ ಎಷ್ಟಿದೆಯೋ ಅಷ್ಟೇ ಶ್ರಮ ಅನಂತಕುಮಾರ್ ಅವರದ್ದೂ ಇದೆ. ರಾಜ್ಯ ಬಿಜೆಪಿ ಪಾಲಿಗೆ ಯಡಿಯೂರಪ್ಪ ದೇಹವಾದರೆ ಅನಂತಕುಮಾರ ಮೆದುಳಿನಂತೆ ಕೆಲಸ ಮಾಡಿದ್ದಾರೆ.

2003-04 ರಲ್ಲಿ ಬಿಜೆಪಿ 80 ಸ್ಥಾನಗಳನ್ನು ಗೆಲ್ಲುವ ಮೂಲಕ ರಾಜ್ಯದಲ್ಲಿ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿತು. ಆ ಅವಧಿಯಲ್ಲಿ ನಾನು ಕೂಡ ಪ್ರಥಮ ಬಾರಿಗೆ ಶಾಸಕನಾಗಿ ವಿಧಾನಸಭೆ ಪ್ರವೇಶಿಸಿದ್ದು ನನಗೆ ಹೆಮ್ಮೆಯ ವಿಚಾರವಾಗಿದೆ.



ಸದಾ ಹಸನ್ಮುಖಿಯಾಗಿ ಹಾಸ್ಯ ಚಟಾಕಿಗಳನ್ನು ಹಾರಿಸುತ್ತ ಕಾರ್ಯಕರ್ತರನ್ನು ಹುರಿದುಂಬಿಸುತ್ತಾ ಕೆಲಸ ಮಾಡುವ ಅವರ ಕಾರ್ಯಶೈಲಿ ಮುಂದಿನ ಪೀಳಿಗೆಗೆ ಮಾದರಿಯಾಗಿದೆ. ವಾಜಪೇಯಿ ಅವಧಿಯಲ್ಲಿ ಕೇಂದ್ರ ನಾಗರಿಕ ವಿಮಾನಯಾನ, ಪ್ರವಾಸೋದ್ಯಮ, ಸಂಸ್ಕೃತಿ, ಯುವಜನ ಸೇವಾ ಹಾಗೂ ಕ್ರೀಡಾ ಇಲಾಖೆ, ಬಡತನ ನಿರ್ಮೂಲನೆ, ನಗರಾಭಿವೃದ್ಧಿಯಂತಹ ಮಹತ್ವದ ಹುದ್ದೆಗಳನ್ನು ನಿರ್ವಹಿಸಿದರು. ನರೇಂದ್ರಮೋದಿಯವರ ಮಂತ್ರಿಮಂಡಲದಲ್ಲಿ ರಾಸಾಯನಿಕ ಮತ್ತು ರಸಗೊಬ್ಬರ, ಸಂಸದೀಯ ವ್ಯವಹಾರಗಳ ಖಾತೆಗಳ ಸಚಿವರಾಗಿ ಅತ್ಯುತ್ತಮ ಕೆಲಸ ಮಾಡಿದ್ದಾರೆ. ಅವರು ಮೋದಿಯವರ ಮಹತ್ವಾಕಾಂಕ್ಷೆಗಳನ್ನು ಅರಿತು ಕೆಲಸ ಮಾಡುತ್ತಿದ್ದರು. ಕೈಗಾರಿಕೆಗಳ ಪಾಲಾಗುತ್ತಿದ್ದ ರೈತರ ಯೂರಿಯಾಗೆ ಬೇವು ಲೇಪನ ಮಾಡುವ ಮೂಲಕ ರೈತರಿಗೇ ತಲುಪಿಸಿದರು. ಔಷಧ ಮಾಫಿಯಾದಿಂದ ಔಷಧಿಗಳ ಬೆಲೆ ಗಗನಕ್ಕೆ ಏರಿದ ಸಂದರ್ಭದಲ್ಲಿ ಜನೌಷಧಿ ಕೇಂದ್ರಗಳನ್ನು ತೆರೆದು ದುಬಾರಿ ಬೆಲೆಯ ಔಷಧಿಗಳನ್ನು ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ನೀಡಿದ ಕೀರ್ತಿ ಅನಂತ್ ಕುಮಾರ್ ಅವರಿಗೆ ಸಲ್ಲುತ್ತದೆ.

ಅಲ್ಲದೆ ಸಾಮಾಜಿಕ ಕಾರ್ಯಗಳಲ್ಲಿ ಮುಂಚೂಣಿಯಲ್ಲಿದ್ದ ಅವರು, ಅನ್ನ, ಆರೋಗ್ಯ, ಅಕ್ಷರ ಎಂಬ ಕಲ್ಪನೆಯಲ್ಲಿ ಅದಮ್ಯಚೇತನ ಸಂಸ್ಥೆ ಪ್ರಾರಂಭಿಸಿ ಸಮಾಜಕ್ಕೆ ತಮ್ಮಿಂದಾಗುವ ಸೇವೆ ಸಮರ್ಪಿಸಿದ್ದಾರೆ. ಪರಿಸರದ ಕುರಿತು ಅತೀವವಾದ ಕಾಳಜಿ ಹೊಂದಿದ್ದ ಅವರು ಪ್ರಕೃತಿ-ಸಂಸ್ಕೃತಿ ಎಂಬ ವಿನೂತನ ಕಾರ್ಯಕ್ರಮದ ಮೂಲಕ ಬೆಂಗಳೂರು ಮಹಾನಗರದಲ್ಲಿ ಒಂದು ಲಕ್ಷ ಸಸಿ ನೆಡುವ ಮೂಲಕ ಕ್ರಾಂತಿಕಾರಿ ಕಾರ್ಯಕ್ಕೆ ನಾಂದಿ ಹಾಡಿದ್ದಾರೆ.

ಅವರಿಗೆ ಕರ್ನಾಟಕದ ಬಗ್ಗೆ ನಮ್ಮ ಭಾಷೆಯ ಬಗ್ಗೆ ಇದ್ದ ಕಾಳಜಿ ಸ್ಮರಣೀಯವಾದುದು. ರಾಜ್ಯ ಮತ್ತು ಕೇಂದ್ರದಲ್ಲಿ ಯಾವುದೇ ಸರ್ಕಾರವಿದ್ದರೂ ದೆಹಲಿಯಲ್ಲಿಯ ಎಲ್ಲ ಕೆಲಸಗಳನ್ನು ಮುಂದೆ ನಿಂತು ಮಾಡುತ್ತಿದ್ದರು. ರಾಜ್ಯ ಸರ್ಕಾರದ ಪಾಲಿಗೆ ಆಡಳಿತದ ಶಾಶ್ವತ ದೆಹಲಿ ಪ್ರತಿನಿಧಿಯಾಗಿದ್ದರು. ಕಾವೇರಿ ನೀರು ಹಂಚಿಕೆ ಹಾಗೂ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನ ಮಾನ ಸೇರಿದಂತೆ ಎಲ್ಲ ಹೋರಾಟಗಳಲ್ಲಿ ಅವರು ರಾಜ್ಯದ ಪರವಾಗಿ ಮುಂಚೂಣಿಯಲ್ಲಿ ನಿಂತು ಧ್ವನಿ ಎತ್ತುತ್ತಿದ್ದರು. ಪ್ರತಿ ಬಾರಿ ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದ ಅವರು ವಿಶ್ವ ಸಂಸ್ಥೆಯಲ್ಲಿ ಕನ್ನಡದಲ್ಲಿ ಭಾಷಣ ಆರಂಭಿಸಿ ಗಮನ ಸೆಳೆದರು. ಅಲ್ಲದೇ ತಮ್ಮ ಸಹಿ ಕನ್ನಡದಲ್ಲಿಯೇ ಮಾಡುತ್ತಿದ್ದ ಅವರು ಒಬ್ಬ ಅಪ್ರತಿಮ ಕನ್ನಡ ಪ್ರೇಮಿಯಾಗಿದ್ದರು.

ಇಂತಹ ಕ್ರಿಯಾಶೀಲ ಮೇರು ವ್ಯಕ್ತಿತ್ವದ ಹಿರಿಯ ನಾಯಕರು ಪಕ್ಷಕ್ಕೆ ಮತ್ತು ರಾಷ್ಟ್ರಕ್ಕೆ ಪ್ರೇರಣೆಯ ಸ್ರೋತವಾಗಿ ಶಾಶ್ವತವಾಗಿ ಉಳಿದಿದ್ದಾರೆ. ಅವರು ಹಾಕಿಕೊಟ್ಟ ಸನ್ಮಾರ್ಗ, ದೂರದೃಷ್ಟಿಯ ವಿಚಾರಧಾರೆಗಳು, ಹೇಳಿಕೊಟ್ಟ ಮತ್ತು ಬದುಕಿ ತೋರಿಸಿದ ಮೌಲ್ಯಗಳ ಮೂಲಕ ನಮ್ಮ ಮನದಲ್ಲಿ ಸದಾ ಹಸಿರಾಗಿದ್ದಾರೆ.

# ಸೂಕ್ಷ್ಮಜೀವಿ ಪ್ರಪಂಚ ಮತ್ತು ನಮ್ಮ ಆಹಾರ ಪದ್ಧತಿ

ಪುಟ 6 ರಿಂದ ಕೈಗಾರಿಕೀಕೃತ ಆಧುನಿಕ ಆಹಾರ ಪದ್ಧತಿಯಲ್ಲಿ ಜನರು ಕಡಿಮೆ ನಾರಿನಂಶ ಮತ್ತು ಕ್ಯಾಲೋರಿಗಳನ್ನು ಹೊಂದಿದ ಸಂಸ್ಕರಿತ ಆಹಾರವನ್ನು ಸೇವಿಸುತ್ತಾರೆ. ಇದರಲ್ಲಿ ವೈವಿಧ್ಯತೆ ಕಡಿಮೆ. ಪರಿಣಾಮವಾಗಿ, ಇಂತಹ ಆಹಾರವು ದೇಹದ ವ್ಯವಸ್ಥೆಯ ಜೊತೆಗೆ ಸರಿಯಾಗಿ ಹೊಂದಿಕೊಳ್ಳದೆ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಇದು ನಮ್ಮ ನಗರಗಳಲ್ಲಿ ವಾಸಿಸುತ್ತಿರುವ ಜನರ ಪರಿಸ್ಥಿತಿ.

**ಮನೋಜೈವಿಕ ಜಗತ್ತು**

ಮನೋಜೈವಿಕ ಜಗತ್ತು ಎಂಬ ಒಂದು ಜಗತ್ತಿದೆ. ಇದನ್ನು ಗಮನಿಸಿದರೆ ಭಯವಾಗುತ್ತದೆ. ಪ್ರತಿಯೊಂದು ಸೂಕ್ಷ್ಮಜೀವಿಯೂ ತನ್ನದೇ ಆದ ಛಾಪನ್ನು ಹೊಂದಿರುವುದನ್ನು ಗುರುತಿಸಿರುವ ಸಂಶೋಧಕರು ಅನುಕ್ರಮಣಿಕೆಗಳನ್ನು (sequencing) ಸಿದ್ಧಪಡಿಸಿದ್ದಾರೆ. ಕರುಳಿನಲ್ಲಿರುವ ಬ್ಯಾಕ್ಟೀರಿಯಾಗಳು ನಮ್ಮ ಸಾಮಾನ್ಯ ಆರೋಗ್ಯವನ್ನು ನಿರ್ಧರಿಸುವ, ಮೆದುಳಿನ ಮೇಲೆ ನೇರವಾಗಿ ಪರಿಣಾಮ ಬೀರುವ ಜೀರ್ಣಕಾರಕಗಳನ್ನು ಉತ್ಪಾದಿಸುತ್ತವೆ. ಪ್ರತಿಯೊಂದು ಕಾಯಿಲೆಯ ಹಿಂದೆಯೂ ಒಂದು ನಿರ್ದಿಷ್ಟ ಸೂಕ್ಷ್ಮಜೀವಿಯ ಕೈವಾಡವನ್ನು ಕಾಣಬಹುದು. ಪ್ರತಿಯೊಂದು ಮನೋವ್ಯಾಧಿಗೂ ನಿರ್ದಿಷ್ಟ ಸೂಕ್ಷ್ಮಜೀವಿಗಳೇ ಕಾರಣ. ಮಾನಸಿಕ ಅನಾರೋಗ್ಯದ ಲಕ್ಷಣಗಳಿಗೆ ಕರುಳಿನ ಬ್ಯಾಕ್ಟೀರಿಯಾಗಳೇ ಕಾರಣ.

ಕರುಳಿನಲ್ಲಿ ಆರೋಗ್ಯಕರ ಬ್ಯಾಕ್ಟೀರಿಯಾಗಳಿರಬೇಕಾದರೆ ನಾವು ಆರೋಗ್ಯಕರ ಆಹಾರವನ್ನು ಸೇವಿಸಬೇಕು. ಮನೆಯೊಳಗಿನ ಕ್ರಿಮಿರಹಿತ ಸುರಕ್ಷಿತ ವಾತಾವರಣದಿಂದ ಹೊರಬಂದು ಪರಿಸರದ ಒಡನಾಟದಲ್ಲಿರಬೇಕು. ಪರಿಸರದ ಸಂಪರ್ಕದಿಂದ ನಮ್ಮ ದೇಹದಲ್ಲಿ ಆರೋಗ್ಯಕರ ಸೂಕ್ಷ್ಮಜೀವಿ ಜಗತ್ತು ನಿರ್ಮಾಣವಾಗಿ ಎಲ್ಲ ಕಾಯಿಲೆಗಳ ಬಾಧೆಯಿಂದ ನಾವು ಮುಕ್ತರಾಗಬಹುದು. ನಮ್ಮ ಆರೋಗ್ಯದ ಕೀಲಿ ನಮ್ಮ ಕೈಯಲ್ಲಿಯೇ ಇದೆ. ಆರೋಗ್ಯಕರ ಸತ್ವಭರಿತ ಆಹಾರವನ್ನು ಸೇವಿಸುವ ಆಯ್ಕೆ ನಮಗಿದೆ. ಈ ಕುರಿತು ಇಂದು ಎಲ್ಲ ಭಾರತೀಯರಿಗೂ ಅರಿವು ಮೂಡಿಸುವುದು ಅಗತ್ಯ.

**ಸಾಂಪ್ರದಾಯಿಕ ಆಹಾರ ಪದ್ಧತಿ**

ನಾವು ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯತ್ತ ಮರಳಬೇಕು. ನಮ್ಮ ಆಹಾರ ಪದ್ಧತಿಯಲ್ಲಿ ಆರೋಗ್ಯಕ್ಕೆ ಪೂರಕವಾದ ಶರ್ಕರ ಪಿಷ್ಟ, ಪ್ರೊಟೀನ್, ಕೊಬ್ಬು, ನಾರು, ಜೀವಸತ್ವ ಮುಂತಾದ ಎಲ್ಲ ಪೋಷಕಾಂಶಗಳನ್ನು ಒಳಗೊಂಡಿರುವ ವೈವಿಧ್ಯಮಯ ಪದಾರ್ಥಗಳಿವೆ. ನಮ್ಮ ಸಾಂಪ್ರದಾಯಿಕ ಊಟದಲ್ಲಿ ಬಳಸುವ ಮಸಾಲೆ ಪದಾರ್ಥಗಳು ಕೇವಲ ಪೋಷಕಾಂಶಗಳನ್ನು ಒದಗಿಸುವುದಲ್ಲದೆ ನಮ್ಮ ರೋಗಪ್ರತಿರೋಧ ವ್ಯವಸ್ಥೆಗೆ ಪೂರಕವಾದ ಅಂಶಗಳನ್ನೂ ಪೂರೈಕೆ ಮಾಡುತ್ತವೆ. ನಮ್ಮ ಆಹಾರವು ರಕ್ತದ ಸಕ್ಕರೆ ಪ್ರಮಾಣವನ್ನು ನಿಯಂತ್ರಿಸುತ್ತದೆ. ನಮಗೆ ಅರಿವಿಲ್ಲದ ಅನೇಕ ಪ್ರಯೋಜನಗಳನ್ನೂ ನೀಡುತ್ತದೆ. ಹಣ್ಣು, ತರಕಾರಿ, ಚಟ್ನಿ, ಉಪ್ಪಿನಕಾಯಿ ಮುಂತಾದ ವರ್ಣರಂಜಿತ ಪದಾರ್ಥಗಳು, ಉತ್ತಮ ಪ್ರೊಬಯೋಟಿಕ್, ಪ್ರಿಬಯೊಟಿಕ್ ಗಳು, ನಾರಿನಂಶ ಹೊಂದಿರುವ ಕಿರುಧಾನ್ಯಗಳು ಮುಂತಾದ ವರ್ಣರಂಜಿತ ಭೋಜನವನ್ನು words ನಾವು ದೇಶದ ಯಾವುದೇ ಮೂಲೆಯಲ್ಲಿ ಬೇಕಾದರೂ ನೋಡಬಹುದು. ನಾವು ನಮ್ಮ ಬೇರುಗಳನ್ನು ಮರೆತಿದ್ದೇವೆ. ಸ್ಥಳೀಯವಾಗಿ ಬೆಳೆಯುವ ಆಹಾರವನ್ನು ಸೇವಿಸುವುದರ ಮಹತ್ವವನ್ನು ನಾವು ಮರೆತಿದ್ದೇವೆ. ಋತುಮಾನಕ್ಕೆ ಅನುಗುಣವಾದ, ವರ್ಣರಂಜಿತ ಸ್ಥಳೀಯ ಆಹಾರವನ್ನು ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದು ಎಂಬ ಸಂದೇಶವನ್ನು ಪ್ರತಿಯೊಬ್ಬ ಭಾರತೀಯನಿಗೂ ಇಂದು ನಾವು ಮುಟ್ಟಿಸಬೇಕಾಗಿದೆ.

# ಸಮಾಜಸೇವೆಯಲ್ಲಿ ಯುವಜನರು ಹೇಗೆ ಪಾಲ್ಗೊಳ್ಳಬಹುದು?

ಡಾ. ಶ್ರೀನಿವಾಸ ಬಳ್ಳಿ
ಕುಲಪತಿಗಳು, ನೃಪತುಂಗ ವಿಶ್ವವಿದ್ಯಾನಿಲಯ

ಅದೊಂದು ಶುಕ್ರವಾರ ಬೆಂಗಳೂರು ಮತ್ತು ಮೈಸೂರಿನಿಂದ ಹತ್ತು ಯುವತಿಯರು ಮತ್ತು ಸುಮಾರು 30 ಜನ ಯುವಕರು ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಗುತ್ತೆಹಸಿರು ಗ್ರಾಮಕ್ಕೆ ಬಂದರು. ಬೆನ್ನಿಗೊಂದು ಬ್ಯಾಗ್ ಕಟ್ಟಿಕೊಂಡು ತುಂಬ ಲವಲವಿಕೆಯಿಂದ ಹರಟುತ್ತ ಬಂದ ಇವರನ್ನು ಹಳ್ಳಿಗರು ನೋಡಿ ಕೊಡಗಿನ ಸವಿಯನ್ನು ಅನುಭವಿಸಲು ವಾರಾಂತ್ಯದಲ್ಲಿ ಪ್ರವಾಸಕ್ಕೆ ಬಂದ ಪ್ರವಾಸಿಗರಿರಬೇಕು ಎಂದುಕೊಂಡರು.

ಆದರೆ ಅವರ ಊಹೆ ಸುಳ್ಳಾಯಿತು. ಬಂದವರು ಬರೀ ಪ್ರವಾಸಿಗರಾಗಿರಲಿಲ್ಲ, ಹಳ್ಳಿಯಲ್ಲಿ ಒಂದು ಪುಟ್ಟ ಬದಲಾವಣೆಯನ್ನು ಉಂಟುಮಾಡಲು ಬಯಸಿ ಬಂದ ಯುವಕರ ಯುವತಿಯರಾಗಿದ್ದರು. ಬಂದವರೇ ಅಲ್ಲಿಯ ಆ ಪುಟ್ಟ ಸರ್ಕಾರಿ ಕನ್ನಡ ಶಾಲೆಯ ಹಳೆವಿದ್ಯಾರ್ಥಿಗಳು, ಊರಿನ ಹಿರಿಯರು ಮತ್ತು ಶಾಲೆಯ ಅಭಿವೃದ್ಧಿ ಸಮಿತಿಯ ಸದಸ್ಯರನ್ನು ಈ ಯುವಕರು ಒಟ್ಟಿಗೆ ಸೇರಿಸಿ ತಮ್ಮ "ಸ್ಕೂಲ್ ಬೆಲ್" ಕಾರ್ಯಕ್ರಮದ ಬಗ್ಗೆ ವಿವರಿಸಿದರು. ಹಳೆವಿದ್ಯಾರ್ಥಿಗಳು ಸುಣ್ಣ ಬಣ್ಣದ ಖರ್ಚನ್ನು ವಹಿಸಿಕೊಂಡರು. ಊರಿನವರು ಬೇಕಾದ ಸಲಕರಣೆಯನ್ನು ಒದಗಿಸಿದರು. ನೋಡ ನೋಡುತ್ತಿದ್ದಂತೆಯೇ ಇಡೀ ಶಾಲೆಯ ಸ್ವಚ್ಛತೆಯಾಯಿತು. ಶಾಲೆಯ ಸುತ್ತಲಿನ ಪರಿಸರ, ಮೈದಾನ, ಧ್ವಜಸ್ತಂಭಗಳು ಎಲ್ಲಾ ಮೈಕೊಡವಿ ಸ್ವಚ್ಛಗೊಂಡವು. ಮರುದಿನ ಸುಣ್ಣ ಬಣ್ಣದ ಶೃಂಗಾರವಾಯಿತು.

ಶಿಕ್ಷಕರ ಮೇಲ್ವಿಚಾರಣೆಯಲ್ಲಿ ಆಯಾ ಕ್ಲಾಸ್ ಗಳು ಎ.ಪಿ.ಟಿ.ಸಿ ಪಠ್ಯಕ್ಕೆ ತಕ್ಕಂತೆ ಅಕ್ಷರ, ಅಂಕಿಸಂಖ್ಯೆ, ವಿಜ್ಞಾನ, ಸಮಾಜ ವಿಜ್ಞಾನ, ಭಾಷಾ ವಿಜ್ಞಾನ, ಹೀಗೆ ವಿವಿಧ ವಿಷಯಗಳಿಗೆ ಸಂಬಂಧಪಟ್ಟಂತೆ ಅಂದ ಚೆಂದದ ರಂಗುರಂಗಿನ ಚಿತ್ರಗಳನ್ನು ಈ ಯುವಕರು, ಕಲಾವಿದರು ಗೋಡೆಗಳ ಮೇಲೆ ಚಿತ್ರಿಸಿದರು. ಇಷ್ಟು ದಿವಸ ಬಾಡಿ ಹೋಗಿದ್ದ ಸರ್ಕಾರಿ ಶಾಲೆ ಶೃಂಗಾರಗೊಂಡು ನಿಜವಾದ ಸರಸ್ವತಿ ಮಂದಿರವಾಗಿ ನಳನಳಿಸ ತೊಡಗಿತ್ತು. ಮರುದಿನ ಶಾಲೆಗೆ ಬಂದ ಮಕ್ಕಳಿಗೆ ಅಚ್ಚರಿ ಕಾದಿತ್ತು. ಇದು ನಮ್ಮದೇ ಶಾಲೆಯೇ ಎಂದು ಅಚ್ಚರಿಗೊಳ್ಳುವಷ್ಟು ಅದು ಬದಲಾಗಿತ್ತು. ಗೋಡೆಗಳ ಮೇಲಿನ ಬಣ್ಣ ಬಣ್ಣದ ಚಿತ್ತಾರಗಳು ಇವರನ್ನು ಇನ್ನಷ್ಟು ಖುಷಿಗೊಳಿಸಿದ್ದವು.

ಇದು ನನ್ನ ಶಾಲೆ ಎಂದು ಹೆಮ್ಮೆಯಿಂದ ಹೇಳುವಂತೆ ಬದಲಾಗಿತ್ತು ಅವರ ಆ ಶಾಲೆ. ಇದರ ಪರಿಣಾಮ ವಿದ್ಯಾರ್ಥಿಗಳ ಹಾಜರಿ ಸಂಖ್ಯೆ ಸುಧಾರಿಸಿತು. ಮುಂದಿನ ವರ್ಷಗಳಲ್ಲಿ ಪ್ರವೇಶ ಬಯಸಿ ಬರುವವರ ಸಂಖ್ಯೆ ಈ ಕನ್ನಡ ಶಾಲೆಗೆ ಜಾಸ್ತಿಯಾಯಿತು. ಎರಡು ವರ್ಷಗಳ ನಂತರ ಸರ್ಕಾರವೇ ಅಲ್ಲಿ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಶ್ ಮಾಧ್ಯಮವನ್ನು ಕೂಡ ಪ್ರಾರಂಭಿಸಿತು. ಶಾಲೆಯ ಹಳೆವಿದ್ಯಾರ್ಥಿಗಳು ತಮ್ಮ ಬಿಡುವಿನ ಸಮಯದಲ್ಲಿ ಮಕ್ಕಳಿಗೆ ಇಂಗ್ಲೀಶ್, ಗಣಿತ ಮತ್ತು ವಿಜ್ಞಾನವನ್ನು ಬೋಧಿಸತೊಡಗಿದರು. ಈಗ ಈ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇಡೀ ಊರಿನ ಎಲ್ಲ ಜನರ ಹೆಮ್ಮೆಯ ವಿದ್ಯಾಕೇಂದ್ರವಾಗಿದೆ. ಇದು ಯುವಕರೇ ಸ್ವಯಂಪ್ರೇರಣೆಯಿಂದ ವಾರಾಂತ್ಯದಲ್ಲಿ ಮಾಡಿದ ಜವಾಬ್ದಾರಿಯುತ ಕೆಲಸದ ಫಲವಾಗಿದೆ. ಇದೇ ರೀತಿ ಬೆಂಗಳೂರು, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ, ಕೊಡಗು, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಸುಮಾರು 200 ಕ್ಕಿಂತ ಹೆಚ್ಚು ಶಾಲೆಗಳನ್ನು ಈ ಯುವಕರ ಪಡೆ ಪರಿವರ್ತಿಸಿದೆ.

ಕರೋನಾ ವಿರುದ್ಧದ ಯುದ್ಧದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರುವ ಬಾಗಲಕೋಟೆಯ ಯುವಕರು ಇತ್ತೀಚೆಗೆ ತಮ್ಮ ನಗರದಲ್ಲಿ ಸಾರ್ವಜನಿಕರು ಬೇಕಾಬಿಟ್ಟಿಯಾಗಿ ಬಿಸಾಡಿದ ಮುಖಕವಚಗಳನ್ನೆಲ್ಲ ಸಂಗ್ರಹಿಸಿ ಒಂದು ಕಡೆ ಗುಡ್ಡೆ ಹಾಕಿ ಸುಟ್ಟರು. ತನ್ಮೂಲಕ ನಾಗರಿಕರಲ್ಲಿ ಪರಿಸರದ ಬಗ್ಗೆ ಜವಾಬ್ದಾರಿ ಬಗ್ಗೆ ಅರಿವು ಮೂಡಿಸುವ ಕಾರ್ಯವನ್ನು ಕೈಗೊಂಡರು.



ಚಿತ್ರಕಲೆಯಂತಹ ಸೃಜನಾತ್ಮಕ ಪ್ರಕಾರಗಳಲ್ಲಿ ಆಸಕ್ತಿ ಹೊಂದಿರುವ ಯುವಕರ ದಂಡೊಂದು "ಆರ್ಟ್ ಮ್ಯಾಟರ್" ಎನ್ನುವ ಸಂಘಟನೆಯನ್ನು ಕಟ್ಟಿಕೊಂಡು ಕಲೆಯ ಮೂಲಕ ಜನಜಾಗೃತಿಯನ್ನು ಮಾಡುತ್ತಿದೆ. ಪರಿಸರ, ಆರೋಗ್ಯ, ಶಿಕ್ಷಣ ಮುಂತಾದ ಜ್ವಲಂತ ವಿಷಯಗಳನ್ನು ಎತ್ತಿಕೊಂಡು ಚಿತ್ರಕಲೆ, ಶಾಸ್ತ್ರ, ಮಣ್ಣು ಮತ್ತು ಮರಳಿನ ಕಲೆ, ಶಿಲ್ಪಕಲೆ ಇತ್ಯಾದಿ ವೈವಿಧ್ಯಮಯ ಕಲಾ ಪ್ರಕಾರಗಳ ಮೂಲಕ ಒಂದೊಂದು ಸಲ ಒಂದೊಂದು ಥೀಮ್ ಇಟ್ಟುಕೊಂಡು ಜನಜಾಗೃತಿ, ರಾಷ್ಟ್ರಜಾಗೃತಿಯ ಕೆಲಸವನ್ನು ಮಾಡುತ್ತಿದೆ. ರಾಷ್ಟ್ರಮಟ್ಟದ "ಕಲಾ ಮಂಚ್" ಎನ್ನುವ ಸಂಘಟನೆಯೂ ಇದೇ ರೀತಿಯ ಕೆಲಸವನ್ನು ಮಾಡುತ್ತಿದೆ.

ಕರ್ನಾಟಕ ರಾಜ್ಯ ಸರ್ಕಾರದ "ನಿಶಾ ಜಾಗೃತಿ" ಯೋಜನೆಯಡಿಯಲ್ಲಿ ಹಲವು ವಿಶ್ವ ವಿದ್ಯಾಲಯಗಳು, ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ತಮ್ಮ ಅಕ್ಕಪಕ್ಕದಲ್ಲಿರುವ ಸರ್ಕಾರಿ ಶಾಲೆಗಳನ್ನು ದತ್ತು ತೆಗೆದುಕೊಂಡು ಅವುಗಳ ಪರಿಸರ ಸುಧಾರಣೆ, ಶೈಕ್ಷಣಿಕ ಸುಧಾರಣೆಯಂತಹ ಚಟುವಟಿಕೆಗಳ ಮೂಲಕ ಆ ಶಾಲೆಗಳಿಗೆ ನೈತಿಕ ಬೆಂಬಲ ನೀಡುವ ಶಕ್ತಿಯಾಗಿ ನಿಂತಿವೆ. ಆ ಮೂಲಕ ವಿಶ್ವವಿದ್ಯಾಲಯ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವೆಯ ದೀಕ್ಷೆಯನ್ನು ನೀಡಲು ಪ್ರಯತ್ನಿಸಲಾಗುತ್ತಿದೆ. ಇಂದಿನ ಯುವಜನತೆಗೆ ಸರಿಯಾದ ಮಾರ್ಗದರ್ಶನವನ್ನು ಮಾಡಿದರೆ, ಅವರಿಗೆ ಪ್ರೇರಣೆಯನ್ನು ನೀಡಿದರೆ, ಸಾಮಾಜಿಕ ಕಾರ್ಯದಲ್ಲಿ ಅವರನ್ನು ಯಶಸ್ವಿಯಾಗಿ ತೊಡಗಿಸಬಹುದು ಎನ್ನುವುದಕ್ಕೆ ಇವು ಕೆಲವು ಉದಾಹರಣೆಗಳು ಮಾತ್ರ.

ದೇಶವು ಎದುರಿಸುತ್ತಿರುವ ಇಂತಹ ಕಷ್ಟದ ಸಮಯದಲ್ಲಿ ಅಖಿಲ ಭಾರತದ ಯುವಕರ ಪಡೆಯೇ ದೇಶದ ನಿಜವಾದ ಸಂಪತ್ತು. ನಿಸ್ವಾರ್ಥದಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿರುವ ಯುವಕರನ್ನು ಕಂಡರೆ ಶ್ರೀ ಅನಂತಕುಮಾರ್ ಅವರಿಗೆ ಎಲ್ಲಿಲ್ಲದ ಪ್ರೀತಿ. ಅವರಿಗೆ ತಮ್ಮ ತುಂಬು ಹೃದಯದ ಪ್ರೋತ್ಸಾಹವನ್ನು ಕೊಡುತ್ತಿದ್ದರು. ಅನಂತಕುಮಾರರ ಈ ಲಕ್ಷಣವೇ ಮುಂದೆ ಅದಮ್ಯ ಚೇತನದಂತಹ ಸೇವಾಸಂಸ್ಥೆ ಅಸ್ತಿತ್ವಕ್ಕೆ ಬರಲು ಕಾರಣವಾಯಿತು. ಲಕ್ಷಾಂತರ ಶಾಲಾ ಮಕ್ಕಳಿಗೆ ದಿನನಿತ್ಯದ ಮಧ್ಯಾಹ್ನದ ಊಟ, ಶಾಲೆ ಬಿಟ್ಟ ಮಕ್ಕಳಿಗೆ ಅವರು ಇರುವಲ್ಲಿಯೇ ಹೋಗಿ ಆಟ-ಪಾಠ, ಪರಿಸರ ರಕ್ಷಣೆಗಾಗಿ ಸತ್ಯಾಗ್ರಹ ಮತ್ತು ಇನ್ನಿತರ ಚಟುವಟಿಕೆಗಳನ್ನು ನಡೆಸುತ್ತಿರುವ ಅದಮ್ಯ ಚೇತನದಲ್ಲಿ ಸೇವೆಗೆ ಬದ್ಧರಾಗಿರುವ ಯುವಕರ ಪಡೆಯೇ ಇದೆ. (ಸೌಜನ್ಯ: ಆಕಾಶವಾಣಿ, ಮೈಸೂರು)






ಅದಮ್ಯ ಚೇತನದ ಅಂಗಸಂಸ್ಥೆಯಾದ ಯುವ ಚೇತನದ ಸದಸ್ಯರು ಬೆಂಗಳೂರಿನ ರಸ್ತೆಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಮೊದಲಾದವನ್ನು ತೆಗೆದು ಜನರಲ್ಲಿ ಪರಿಸರ ಜಾಗೃತಿ ಮೂಡಿಸುತ್ತಿದ್ದಾರೆ.

# ಕಣ್ಣ ಮುಂದಿನ ಹುಡುಗ

**ಅನುಭವಕಥನ: ಶ್ರೀ ಹನುಮಂತರಾವ್ | ನಿರೂಪಣೆ: ಟಿ.ಎಸ್. ಗೋಪಾಲ್**

ಇಪ್ಪತ್ತೊಂದನೇ ಶತಮಾನದ ಪ್ರಾರಂಭದ ವರ್ಷಗಳಲ್ಲೊಂದು ದಿನ. ವಿದ್ಯಾಪೀಠದಲ್ಲಿ ಒಂದು ಸಮಾರಂಭ. ಸಮಾರಂಭದ ಮುಖ್ಯ ಅತಿಥಿಯಾಗಿ ಕೇಂದ್ರಮಂತ್ರಿ ಅನಂತಕುಮಾರ್ ಬರುವವರಿದ್ದರು. ಸಭೆಯಲ್ಲಿ ವ್ಯವಸ್ಥಿತವಾಗಿ ಇರಿಸಲಾಗಿದ್ದ ಪೀಠಗಳಲ್ಲಿ ಸಭಿಕರು ಆಗಲೇ ಆಸೀನರಾಗಿದ್ದರು. ಎರಡೂ ಬದಿಯಲ್ಲಿ ಆಸನವ್ಯವಸ್ಥೆಯಿದ್ದು ನಡುವೆ ಅತಿಥಿಗಳ ಆಗಮನಕ್ಕಾಗಿ ಹಾದಿಯನ್ನು ಕಲ್ಪಿಸಲಾಗಿತ್ತು.

ಮಂತ್ರಿಗಳ ಆಗಮನವಾಯಿತು. ಸಭಿಕರ ನಡುವೆ ಮೂರನೆಯ ಸಾಲಿನಲ್ಲಿ ಒಂದೆಡೆ ಕುಳಿತಿದ್ದ ವಯೋವೃದ್ಧರೊಬ್ಬರನ್ನು ಅನಂತಕುಮಾರ್ ಗುರುತಿಸಿದರು. ಅವರತ್ತ ನಡೆದು ಕಾಲುಮುಟ್ಟಿ ನಮಸ್ಕರಿಸಿದರು. ಉಳಿದವರಿರಲಿ, ಆ ವೃದ್ಧರೇ ತಮಗೆ ಸಂದ ಈ ಗೌರವಾರ್ಪಣೆಯನ್ನು ನಿರೀಕ್ಷಿಸಿರಲಿಲ್ಲ. ಈಗ ಸುತ್ತಮುತ್ತಲಿನವರ ಲಕ್ಷ್ಯವೆಲ್ಲ ಆ ವೃದ್ಧರ ಕಡೆಗೆ ಹರಿಯಿತು. ಅಂಥ ಗೌರವಕ್ಕೆ ಆ ವೃದ್ಧರು ಪಾತ್ರರಾಗಲು ಕಾರಣವೇನಿರಬಹುದೆಂಬ ಕುತೂಹಲವೂ ಮೂಡಿತು. ತಮ್ಮತ್ತ ಹೊರಳಿದ ಅನಿರೀಕ್ಷಿತ ಗಮನದಿಂದ ಸಂಕೋಚವಾದಂತೆ ಕಂಡುಬಂದ ಆ ವೃದ್ಧರನ್ನು ಅಕ್ಕಪಕ್ಕದವರು ಕೇಳಿಯೂ ಕೇಳಿದರು. " ಅನಂತಕುಮಾರ ನನ್ನ ಕಣ್ಣ ಮುಂದಿನ ಹುಡುಗ. ಅವನ ತಂದೆಯೂ ನಾನೂ ಸಹೋದ್ಯೋಗಿಗಳು. ಚಿಕ್ಕಂದಿನಿಂದ ಕಂಡ ಪರಿಚಯ ಹೇಗೂ ಇರಲಿ. ಆತನಿಗೆ ಹಿರಿಯರ ಬಗೆಗೆ ಮೊದಲಿನಿಂದಲೂ ತುಂಬ ಗೌರವ" ಎಂದು ಅವರು ವಿವರಣೆಕೊಟ್ಟಿದ್ದೂ ಆಯಿತು.

ಅನಂತಕುಮಾರರ ತಂದೆ ನಾರಾಯಣಶಾಸ್ತ್ರಿಯವರ ಸಹೋದ್ಯೋಗಿಗಳಾಗಿದ್ದ ಆ ವಯೋವೃದ್ಧರ ಹೆಸರು ಹನುಮಂತರಾವ್. ಹುಬ್ಬಳ್ಳಿಯ ಎಂ.ಟಿ.ಎಸ್. ಕಾಲೊನಿಯಲ್ಲೂ ಇವರ ಮನೆಗಳು ಆಸುಪಾಸಿನಲ್ಲಿದ್ದುದರಿಂದ ಅನಂತಕುಮಾರ್ ನಿಜಾರ್ಥದಲ್ಲೂ ಹನುಮಂತರಾಯರ ಕಣ್ಣ ಮುಂದಿನ ಹುಡುಗನೇ ಆಗಿದ್ದರು. ಹಾಗೆ ನೋಡಿದರೆ, ಹನುಮಂತರಾಯರು ಶಾಸ್ತ್ರಿಗಳು ಹುಬ್ಬಳ್ಳಿಗೆ ಬರುವ ಮುನ್ನವೇ ಅಲ್ಲಿನ ರೈಲ್ವೆ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದರು. ಶಾಸ್ತ್ರಿಗಳು ಇದ್ದುದು ಮೈಸೂರಿನಲ್ಲಿ. ೧೯೫೭ರ ಕಾಲಕ್ಕೆ ರೈಲ್ವೇ ಇಲಾಖೆಯಿಂದ ಪ್ರಥಮದರ್ಜೆ ಗುಮಾಸ್ತರ ನೇರ ನೇಮಕಾತಿಗಾಗಿ ಆಯ್ಕೆಯಾದ ಇಪ್ಪತ್ತೈದು ಜನರ ತಂಡದಲ್ಲಿ ನಾರಾಯಣಶಾಸ್ತ್ರಿಯವರೂ ಇದ್ದು ಹುಬ್ಬಳ್ಳಿಗೆ ವರ್ಗವಾಗಿ ಬಂದರು. ೧೯೫೦ರ ದಶಕದಲ್ಲಿ ಎಂ.ಟಿ.ಎಸ್. ಕಾಲೊನಿ ಹುಬ್ಬಳ್ಳಿಯ ಹೊರಬಡಾವಣೆಯಾಗಿದ್ದುದು ಮಾತ್ರವಲ್ಲ, ತನ್ನದೇ ಆದ ಪ್ರಪಂಚವನ್ನೇ ಸೃಷ್ಟಿಸಿಕೊಂಡಿತ್ತು. ಅಲ್ಲಿದ್ದ ನಿವಾಸಿಗಳೆಲ್ಲ ಬಹುತೇಕ ರೈಲ್ವೆ ಉದ್ಯೋಗಿಗಳು ಮತ್ತವರ ಕುಟುಂಬದವರು. ಹುಬ್ಬಳ್ಳಿ ನಗರ ಮಧ್ಯದ ರೈಲ್ವೆ ನಿಲಾಣ, ಕಚೇರಿಗಳಿಂದ ಕಾಲೊನಿ ಸಾಕಷ್ಟು ದೂರವಾಗಿಯೇ ಇತ್ತು. ಆದರೆ, ಹುಬ್ಬಳ್ಳಿಯ ಇತರೆಡೆಗಳಿಗೆ ಹೋಲಿಸಿದರೆ ಅಲ್ಲಿ ನೀರಿನ ಸೌಕರ್ಯ ಚೆನ್ನಾಗಿತ್ತು. ಅಲ್ಲಿ ವಾಟರ್ ಟ್ಯಾಂಕಿನ ನಿರ್ಮಾಣವಾಗಿದ್ದುದು ನಿವಾಸಿಗಳಿಗೆ ಬಹು ಅನುಕೂಲವಾಗಿತ್ತು. ಆದ್ದರಿಂದಲೇ ರೈಲ್ವೆ ಉದ್ಯೋಗಿಗಳು ದೂರವನ್ನು ಅಲಕ್ಷ್ಷಿಸಿ ಕಾಲೊನಿಯ ವಾಸವನ್ನು ಆಯ್ಕೆಮಾಡಿಕೊಳ್ಳುತ್ತಿದ್ದರು.

ರಸ್ತೆಗಳು ಡಾಂಬರು ಕಾಣದಿದ್ದ ದಿನಗಳವು. ದೂಳು ತುಂಬಿದ ಮಣ್ಣು ರಸ್ತೆಗಳಲ್ಲಿ ಸಂಚರಿಸಿ ಕಚೇರಿಗೆ ಹೋಗಿ ಬರುವಷ್ಟರಲ್ಲಿ ಬಟ್ಟೆಗಳೂ ಧರಿಸಿಕೊಂಡವರೂ ಗುರುತುಕಾಣದಂತಾದರೂ ಅಚ್ಚರಿಯಿಲ್ಲ. ಎಂಟಿಎಸ್ ನಿವಾಸಿಗಳ ಕೋರಿಕೆಯ ಮೇರೆಗೆ ಕಾಲೊನಿಯಿಂದ ಹುಬ್ಬಳ್ಳಿ ರೈಲ್ವೆ ಕಚೇರಿಯವರೆಗೆ ಬೆಳಗ್ಗೆ ಸಂಜೆ ಸಿಟಿಬಸ್ ವ್ಯವಸ್ಥೆಯಾಯಿತು. ಸಿಟಿಬಸ್ ಓಡಾಟ ಪ್ರಾರಂಭವಾದ ಮೇಲೆ ಕಾಲೊನಿಯವರ ದಿನಚರಿ ಸುಧಾರಿಸಿತೆಂದರೆ ಅತಿಶಯವಲ್ಲ.

ಕಾಲೊನಿಯಲ್ಲಿ ಹುಡುಗರ ಪಟಾಲಂ ಸಾಕಷ್ಟು ದೊಡ್ಡದಾಗೇ ಇತ್ತು. ಆ ಗುಂಪಿಗೆ ಅನಂತಕುಮಾರನೇ ನಾಯಕ. ಹನುಮಂತರಾಯರಂಥ ಹಿರಿಯರು ಕಾಣುವಾಗಲೆಲ್ಲ ಅನಂತಕುಮಾರನ ಗುಂಪು ಲಾಠಿ ಹಿಡಿದು ಸುತ್ತುತ್ತಲೋ ಮರಗಳ ಕೊಂಬೆಗಳ ಮೇಲೆ ವಿಹರಿಸುತ್ತಲೋ ಇರುವುದು. ಹುಡುಗರನ್ನು ಗುಂಪುಕಟ್ಟಿಕೊಂಡು ಅಲೆದಾಡುವ ಅನಂತನ ಸ್ವಭಾವ ಈ ಹಿರಿಯರಿಗೆ ಕಿಂಚಿತ್ತೂ ಇಷ್ಟವಾಗದು. ಈ ಮಕ್ಕು ಓದೋದು ಬರಿಯೋದು ಯಾವಾಗ' ಎಂದು ಗೊಣಗಿಕೊಂಡು ಹನುಮಂತರಾವ್ ಸುಮ್ಮನಾಗುವರು.

ಕಾಲ ಎಷ್ಟು ಬೇಗ ಕ್ರಮಿಸುತ್ತದೆ ಎನ್ನುವುದೇ ಒಂದು ಅಚ್ಚರಿ. ಕಾಲಾಂತರದಲ್ಲಿ ಎಂತೆಂಥ ಪರಿವರ್ತನೆಗಳೂ ಆಗಬಹುದು ಎನ್ನುವುದು ಇನ್ನೂ ಬೆರಗು ಹುಟ್ಟಿಸಬಹುದು. ಗಿರಿಜಾ ಶಾಸ್ತ್ರಿಯವರು ಸಾಮಾಜಿಕ ಕಾರ್ಯಕರ್ತೆಯಾಗಿ ಜನಪ್ರಿಯರಾದರು, ಬಿಜೆಪಿ ಪಕ್ಷ ಸೇರಿ ಹುಬ್ಬಳ್ಳಿ ಭಾಗದ ರಾಜಕೀಯ ವಲಯಗಳಲ್ಲಿ ಪರಿಚಿತರಾದರು, ಹುಬ್ಬಳ್ಳಿ ಕಾರ್ಪೊರೇಶನ್ನಿನ ಉಪಮೇಯರ್ ಹುದ್ದೆಗೇರಿ ಯಶಸ್ಸು ಪಡೆದರು. ಇನ್ನು ತುಂಟಹುಡುಗಾಟಿಕೆಗಳನ್ನು ದಾಟಿ ಅನಂತಕುಮಾರ್ ರಾಷ್ಟ್ರನಾಯಕನಾಗಿ ಬೆಳೆದ ರೀತಿ ಬೇರೆಯೇ ಇದೆ.

ಆದರೆ, ಕಾಲದ ಬದಲಾವಣೆಗಳಿಗೆ ತಲೆಕೆಡಿಸಿಕೊಳ್ಳದೆ, ಜೀವನ ವ್ಯಕ್ತಿತ್ವಗಳಲ್ಲಿ ಏಕರೀತಿಯಾಗಿದ್ದವರೆಂದರೆ ನಾರಾಯಣಶಾಸ್ತ್ರಿಗಳೇ. ಎತ್ತರದ ಆಕಾರಕ್ಕೆ ತಕ್ಕ ಗಾಂಭೀರ್ಯ, ಸೌಮ್ಯ ಸ್ವಭಾವ. ಗಿರಿಜಾ ಶಾಸ್ತ್ರಿ ಎಷ್ಟು ಮಾತುಗಾರರೋ ಶಾಸ್ತ್ರಿಯವರು ಅಷ್ಟೇ ಮಿತಭಾಷಿ. ಸಾಮಾಜಿಕ ಸೇವೆ, ಚಟುವಟಿಕೆಗಳೆಂದರೆ ಅಲಕ್ಷ್ಯವೆಂದೇನೂ ಇಲ್ಲ. ಆದರೆ ಯಾವ ಪ್ರಚಾರಪ್ರಿಯತೆಯೂ ಅವರಲ್ಲಿ ಕಂಡುಬರದು. ನಾರಾಯಣ ಶಾಸ್ತ್ರಿಯವರ ಜ್ಯೋತಿಷ್ಯಜ್ಞಾನ ಮೇಲ್ಮಟ್ಟದ್ದು. ಜಾತಕ ಬರೆದುಕೊಡುವುದರಿಂದ ಗ್ರಹಗತಿಗಳ ವಿವರಣೆಯವರೆಗೂ ಅವರ ತಿಳಿವಳಿಕೆ ವ್ಯಾಪಕವಾದುದು. ಹನುಮಂತರಾವ್ ಮತ್ತವರ ಹಲವರು ಸಹೋದ್ಯೋಗಿಗಳು ತಮ್ಮ ಮಕ್ಕಳ ಜಾತಕಗಳನ್ನು ಶಾಸ್ತ್ರಿಗಳಿಂದಲೇ ಬರೆಸಿಕೊಂಡಿದ್ದರು. ಅವರಂತೆ ಶಾಸ್ತ್ರಿಗಳ ಜ್ಯೋತಿಷಜ್ಞಾನ ಅನೇಕರ ನೆರವಿಗೆ ಒದಗಿ ಬಂದಿದೆ. ಇಷ್ಟಾದರೂ ಶಾಸ್ತ್ರಿಗಳು ತಮ್ಮ ಜ್ಞಾನವನ್ನು ಮೆರೆಸಿದವರಲ್ಲ. ತಮ್ಮಿಂದ ಜಾತಕ ಬರೆಯಿಸಿಕೊಂಡವರೋ, ಜ್ಯೋತಿಷದ ಪರಿಹಾರ ಪಡೆದವರೋ ಏನಾದರೂ ದಕ್ಷಿಣೆ ಕೊಡಲು ಮುಂದಾದರೆ ಶಾಸ್ತ್ರಿಗಳು ನಿರ್ದಾಕ್ಷಿಣ್ಯವಾಗಿ ನಿರಾಕರಿಸುವರು. ಏನೋ ತನಗೆ ತಿಳಿದಿದ್ದನ್ನು ಹೇಳಿದ್ದೇನೆ, ಕೇಳಿದವರಿಗೆ ಸಹಾಯ ಮಾಡಿದ್ದೇನೆ. ಇದು ಪ್ರತಿಫಲ ಬಯಸಿ ಮಾಡಿದ್ದಲ್ಲ, ನನ್ನ ಹೊಟ್ಟೆಪಾಡಿಗೆ ಉದ್ಯೋಗ ಇದೆ. ಜ್ಯೋತಿಷಜ್ಞಾನ ಅಗತ್ಯವಿದ್ದವರಿಗೆ ಸಹಾಯವಾಗಲಿ, ಅದರಿಂದ ಸಂಪಾದನೆ ಮಾಡುವಂಥ ಯಾವ ಉದ್ದೇಶವೂ ತಮಗಿಲ್ಲ ಎಂದು ಶಾಸ್ತ್ರಿಗಳು ಸ್ನೇಹಿತರೊಡನೆ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಿದ್ದರು. ಇದು ಶಾಸ್ತ್ರಿಯವರ ಸಾಮಾಜಿಕ ಸೇವೆಯ ಒಂದು ಅಜ್ಞಾತಮುಖವೆನ್ನಬಹುದು.



ಪುಟ 10ರಲ್ಲಿ ಮುಂದುವರೆದಿದೆ

# ಕಣ್ಣ ಮುಂದಿನ ಹುಡುಗ

ಪುಟ 9 ರಿಂದ ನಾರಾಯಣ ಶಾಸ್ತ್ರಿಯವರಿಗೆ ಸಾಮಾಜಿಕ ಚಟುವಟಿಕೆಗಳಲ್ಲಿದ್ದ ಆಸಕ್ತಿಗೆ ಇನ್ನೊಂದು ದೊಡ್ಡ ನಿದರ್ಶನವೆಂದರೆ ಎಂಟಿಎಸ್ ಕಾಲೊನಿಯಲ್ಲಿ ಪ್ರತಿವರ್ಷ ನಡೆಯುತ್ತಿದ್ದ ರಾಮನವಮಿ ಉತ್ಸವಗಳು. ಕಾಲೊನಿಯ ಮಧ್ಯಭಾಗದಲ್ಲಿದ್ದ ಮಂಟಪ ಮತ್ತದರ ಮುಂದಿನ ದೊಡ್ಡ ಮೈದಾನವೇ ರಾಮನವಮಿ ಉತ್ಸವಗಳ ಕೇಂದ್ರಸ್ಥಾನ. ನಾರಾಯಣಶಾಸ್ತ್ರಿಯವರೂ ಹನುಮಂತರಾಯರೂ ಗೋಕುಲನಾಥ ಆಚಾರ್ಯರೂ ಈ ಚಟುವಟಿಕೆಗಳ ಸಮಿತಿಯ ಕಾರ್ಯನಿರ್ವಾಹಕರು. ಈ ಸಮಿತಿ ಇಪ್ಪತ್ತೈದು ವರ್ಷ ಬದಲಾಗಲೇ ಇಲ್ಲವೆನ್ನುವುದು ಈ ಮೂವರು ಮಹನೀಯರ ಕಾರ್ಯಶ್ರದ್ಧೆಗೆ ದ್ಯೋತಕ. ಸಮಿತಿಯ ವಾರ್ಷಿಕ 'ಜನರಲ್ ಬಾಡಿ' ಸಭೆ ಕರೆದಾಗಲೆಲ್ಲ ಯಾರೋ ಒಬ್ಬರು 'ಇದೇ ಸಮಿತಿ ಮುಂದುವರೆಯತಕ್ಕದ್ದು' ಎನ್ನುವರು; ಇನ್ನೊಬ್ಬರು 'ನಾನು ಅನುಮೋದಿಸುತ್ತೇನೆ' ಎಂದು ಒಗ್ಗರಣೆ ಹಾಕುವರು.

ಒಂಭತ್ತು ದಿನಗಳ ಉತ್ಸವದಲ್ಲಿ ಹಿರಿಯಕಿರಿಯರೆನ್ನದೆ ಕಾಲೊನಿಯಲ್ಲಿದ್ದವರೆಲ್ಲ ಉತ್ಸಾಹದಿಂದ ಪಾಲ್ಗೊಳ್ಳುವರು. ಅವರವರ ಕೈಲಾದಷ್ಟು ಹಣವನ್ನು ವಂತಿಗೆಯಾಗಿ ನೀಡುವರು. ಹೆಚ್ಚಿನ ಸಂಭಾವನೆಯನ್ನು ಬಯಸದೆ ನಾಡಿನ ಖ್ಯಾತ ಸಂಗೀತಗಾರರೆಲ್ಲ ಈ ರಾಮನವಮಿಯ ಉತ್ಸವದಲ್ಲಿ ಪಾಲ್ಗೊಳ್ಳುವರು. ಈ ಉತ್ಸವದಲ್ಲಿ ಹಾಡಿರುವ ಸಂಗೀತಗಾರರಲ್ಲಿ ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ, ಬಸವರಾಜ ರಾಜಗುರು, ಮಲ್ಲಿಕಾರ್ಜುನ ಮನ್ಸೂರ್ ಮೊದಲಾದ ಖ್ಯಾತನಾಮರೆಲ್ಲರ ಹೆಸರುಗಳಿವೆ ಎಂದಮೇಲೆ ಈ ಉತ್ಸವ ಆ ಪ್ರಾಂತ್ಯದಲ್ಲೆಲ್ಲ ಪ್ರಸಿದ್ಧಿಪಡೆದುದರಲ್ಲಿ ಅಚ್ಚರಿಯೇನು? ಬೆಂಗಳೂರಿನಿಂದ ಮಾಸ್ಟರ್ ಹಿರಣ್ಣಯ್ಯ ತಂಡದವರು ಬಂದು ಇಲ್ಲಿ ನಾಟಕಪ್ರದರ್ಶನ ಮಾಡಿದುದು ಇನ್ನೊಂದು ಹೆಗ್ಗಳಿಕೆ.

ಈ ಪ್ರಾಂತ್ಯದಲ್ಲಿ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೇ ಪ್ರಾಶಸ್ತ್ಯ. ರಾಮನವಮಿ ಎಂದಮೇಲೆ ಕರ್ನಾಟಕ ಸಂಗೀತ ಬೇಡವೇ ಎಂದು ಹನುಮಂತರಾಯರ ಕೊರಗು. ಕರ್ನಾಟಕ ಸಂಗೀತದ ಒಂದೆರಡು ಕಾರ್ಯಕ್ರಮಗಳೂ ಇರಲಿ ಎಂದು ನಿರ್ಧರಿಸಿದ್ದಾಯಿತು. ಆದರೆ, ಸ್ಥಳೀಯರಿಗೆ ಇಷ್ಟವಾಗುವ ದಾಸರ ಪದಗಳನ್ನೇ ಹಾಡುವಂತೆ ಕೇಳಿಕೊಳ್ಳತಕ್ಕದ್ದು ಎಂದು ಯೋಚಿಸಿಕೊಂಡರು. ಹನುಮಂತರಾವ್ ಅವರೇ ಖುದ್ದಾಗಿ ಬೆಂಗಳೂರಿನ ಖ್ಯಾತ ಸಂಗೀತಗಾರ ಆರ್.ಕೆ. ಶ್ರೀಕಂಠನ್ ಅವರನ್ನು ಸಂಪರ್ಕಿಸಿದರು.

ರಾಮನವಮಿ ಉತ್ಸವದಲ್ಲಿ ಬಂದು ಹಾಡುವುದಕ್ಕೆ ಶ್ರೀಕಂಠನ್ ಒಪ್ಪಿಕೊಂಡರು. ಆದರೆ ದಾಸರ ಪದಗಳನ್ನೇ ಹಾಡಬೇಕೆಂಬ ಷರತ್ತನ್ನು ತಳ್ಳಿಹಾಕಿದರು. ದಾಸರ ಪದಗಳನ್ನೇ ಹಾಡಬೇಕೆಂದಿದ್ದರೆ ಯಾರಾದರೂ ಹರಿಕಥೆದಾಸರನ್ನು ಕರೆಸಿ, ಕರ್ನಾಟಕ ಸಂಗೀತಕ್ಕೆ ಒಂದು ಶಾಸ್ತ್ರೀಯವಾದ ತಳಹದಿಯಿದೆ, ಕ್ರಮವಿದೆ, ಅದರ ಪ್ರಕಾರವೇ ಹಾಡತಕ್ಕದ್ದು ಎಂದು ಸ್ಪಷ್ಟಪಡಿಸಿದರು. ಅದರಂತೆಯೇ ಶ್ರೀಕಂಠನ್ ಬಂದು ಹಾಡಿದ್ದೂ ಆಯಿತು, ಜನರೆಲ್ಲ ಕೇಳಿ ಸಂತೋಷಪಟ್ಟಿದ್ದೂ ಆಯಿತು. ಮುಂದಿನ ವರ್ಷಗಳಲ್ಲಿ ರಾಮನವಮಿ ಸಂಗೀತೋತ್ಸವದಲ್ಲಿ ಕರ್ನಾಟಕ ಸಂಗೀತದ ಒಂದೆರಡು ಕಾರ್ಯಕ್ರಮಗಳೂ ಸ್ಥಾನ ಪಡೆದವು.


ನಾಡಿನ ಪ್ರಮುಖ ರಾಜಕಾರಣಿಗಳಲ್ಲೊಬ್ಬರಾಗಿದ್ದ ಸರೋಜಿನಿ ಮಹಿಷಿಯವರು ಕೆಲವೊಮ್ಮೆ ಸಮಾರಂಭಕ್ಕೆ ಆಗಮಿಸಿ ದಿನದ ಮಹತ್ವದ ಬಗೆಗೆ ಭಾಷಣ ಮಾಡಿದ್ದೂ ಇತ್ತು. ಕಾಲೊನಿಯ ಯಾವುದೇ ಸಮಾರಂಭದ ಆಹ್ವಾನ ಪತ್ರಿಕೆಯನ್ನು ಮಹಿಷಿಯವರಿಗೆ ಕಳುಹಿಸುವುದು ರೂಢಿಯಾಗಿತ್ತು.

ಹೀಗೊಮ್ಮೆ ಕಾಲೊನಿಯಲ್ಲಿ ರಾಷ್ಟ್ರೀಯ ದಿನಾಚರಣೆಯೊಂದು ಏರ್ಪಟ್ಟಿತ್ತು. ಅನಿರೀಕ್ಷಿತವಾಗಿ ಸರೋಜಿನಿ ಮಹಿಷಿಯವರು ಆಗಮಿಸಿದರು. ಕಾಲೊನಿಯವರಿಗೆ ಸಡಗರ. ಏಕೆಂದರೆ, ಆಗ ಮಹಿಷಿಯವರು ಕೇಂದ್ರ ಸರ್ಕಾರದಲ್ಲಿ ಸಚಿವೆಯಾಗಿದ್ದರು. ವಿಷಯ ತಿಳಿದ ರೈಲ್ವೆ ಹಿರಿಯ ಅಧಿಕಾರಿಗಳೂ ಸ್ಥಳಕ್ಕೆ ಧಾವಿಸಿ ಬಂದರು. ಕಾರ್ಯಕಾರಿ ಸಮಿತಿಯವರನ್ನು ಕರೆದು ತಮಗೆ ಮುಂಚಿತವಾಗಿ ತಿಳಿಸದೆ ಕೇಂದ್ರಸಚಿವರನ್ನು ಕರೆಸಿದ್ದು ಸರಿಯೇ ಎಂದು ತರಾಟೆಗೆ ತೆಗೆದುಕೊಂಡರು. ಆದರೆ, ತಾವು ಮಾಮೂಲಿನಂತೆ ಮಹಿಷಿಯವರಿಗೆ ಆಹ್ವಾನ ಪತ್ರಿಕೆ ಕಳುಹಿಸಿದ್ದಾಗಿಯೂ, ಕಾಲೊನಿಯ ಚಟುವಟಿಕೆಗಳ ಬಗೆಗಿನ ಅಭಿಮಾನದಿಂದ ಸಚಿವೆ ಬಂದಿರುವರೆಂದು ಸಮಜಾಯಿಷಿ ಕೊಟ್ಟದ್ದಾಯಿತು.

ಕೇಂದ್ರ ಸಚಿವರ ಸ್ವಾಗತಕ್ಕೆ ಕಾಲೊನಿಯ ಸಮಿತಿಯವರು ಯಾವುದೇ ಸಿದ್ಧತೆಯನ್ನೂ ಮಾಡಿಕೊಂಡಿರಲಿಲ್ಲ. ಕಾಲೊನಿ ಊರಿನ ಮಾರುಕಟ್ಟೆ ದೂರವಿದ್ದುದರಿಂದ ಗಣ್ಯರಿಗೆ ಹಾರ ಹಾಕುವುದಕ್ಕೂ ತತ್ವಾರ. ಏನು ಮಾಡುವುದೆಂದು ಯೋಚಿಸುವಷ್ಟರಲ್ಲಿ ಅಲ್ಲಿನ ಗುಡಿಯ ಅರ್ಚಕರು ನೆರವಿಗೆ ಬಂದರು. ದೇವರಿಗೆ ತೊಡಿಸಿದ್ದ ಹಾರವನ್ನೇ ತೆಗೆದು ಸಚಿವೆಯವರಿಗೆ ಹಾಕಿ ಶುಭಕೋರಿದ್ದಾಯಿತು. ತಮಗೊದಗಿದ ಭಾಗ್ಯಕ್ಕೆ ಸಚಿವರೂ ಸಂತೋಷಪಟ್ಟುಕೊಂಡರು.

* * * *

ತನ್ನ ತಂದೆತಾಯಿಯವರ ವ್ಯಕ್ತಿತ್ವ ಸ್ವಭಾವಗಳೂ ಎಂಟಿಎಸ್ ಕಾಲೊನಿಯ ಸಾಮಾಜಿಕ ಜೀವನದ ವೈವಿಧ್ಯಮಯ ದಿನಚರಿಯೂ ಅನಂತಕುಮಾರರ ವ್ಯಕ್ತಿತ್ವದ ಬೆಳೆವಣಿಗೆಗೆ ಸಾಕಷ್ಟು ಕೊಡುಗೆ ನೀಡಿರುವುದರಲ್ಲಿ ಸಂಶಯವಿಲ್ಲ. ಎಂತಲೇ ಅನಂತಕುಮಾರ್ ಕಾಲೊನಿಯ ತುಂಟಹುಡುಗನ ಮಟ್ಟದಿಂದ ವಿದ್ಯಾರ್ಥಿ ನಾಯಕನವರೆಗೆ, ರಾಜಕೀಯ ಕಾರ್ಯಕರ್ತನ ಹಂತದಿಂದ ಲೋಕಸಭಾ ಸದಸ್ಯನಾಗುವವರೆಗೆ ಮುಂದುವರಿಯುವುದು ಸಾಧ್ಯವಾಯಿತೆಂದು ಹನುಮಂತರಾವ್ ಭಾವಿಸಿದ್ದರು. ೧೯೯೬ ರ ಲೋಕಸಭಾ ಚುನಾವಣೆಯ ಫಲಿತಾಂಶ ಬಂದ ಸಂದರ್ಭ. ಹನುಮಂತರಾವ್ ತಮ್ಮ ಗೆಳೆಯ ನಾರಾಯಣ ಶಾಸ್ತ್ರಿಯವರನ್ನು ಕಾಣಲು ವೈಯಾಲಿ ಕಾವಲ್ ನಲ್ಲಿದ್ದ ಅನಂತಕುಮಾರರ ಮನೆಗೆ ಬಂದಿದ್ದರು. ಗೆಳೆಯರಿಬ್ಬರೂ ಕುಶಲೋಪರಿ ಮಾತನಾಡುತ್ತಿದ್ದಾಗಲೇ ಅನಂತಕುಮಾರರ ಆಗಮನವಾಯಿತು. ಬಂದವರೇ ಹಿರಿಯರನ್ನು ಕಂಡು ಕಾಲಿಗೆರಗಿದರು. ತಾವು ಲೋಕಸಭಾ ಚುನಾವಣೆಯಲ್ಲಿ ವಿಜೇತರಾದುದನ್ನು ಹೇಳಿಕೊಂಡರು. ತಮ್ಮ ಮಿತ್ರನ ಮಗನ ಉತ್ಕರ್ಷವನ್ನು ಕಂಡು ಹರ್ಷಿಸಿದ ಹನುಮಂತರಾವ್ ಅನಂತಕುಮಾರರನ್ನು ಬಾಯ್ತುಂಬ ಹರಸಿದರು: ನೀನು ದೊಡ್ಡವರ ಆಶೀರ್ವಾದದಿಂದ, ಸ್ವಪ್ರಯತ್ನದಿಂದ ಈ ಮಟ್ಟಕ್ಕೆ ಏರಿದ್ದೀಯ. ಇದು ಇಲ್ಲಿಯೇ ನಿಲ್ಲುವುದಿಲ್ಲ. ಅತಿ ಶೀಘ್ರದಲ್ಲೇ ನೀನು ಮಂತ್ರಿಯೂ ಆಗುತ್ತೀಯೆ ಎಂದು ಆಶೀರ್ವದಿಸಿದರು. ನೀನು ಮಂತ್ರಿಯಾಗಿ ಉನ್ನತ ಸ್ಥಾನದಲ್ಲಿದ್ದೀಯ, ನನ್ನ ಗೆಳೆಯನ ಮಗ ಅಂತ ನಾನೇನೂ ನಿನ್ನ ಹತ್ತಿರ ಕೆಲಸ ಮಾಡಿಸಿಕೊಳ್ಳುವುದಕ್ಕೆ ಬರುವುದಿಲ್ಲಪ್ಪ. ದೂರದಿಂದಲೇ ಸಂತೋಷಪಡುತ್ತೇನೆ. ನೀನು ಇನ್ನೂ ಕೀರ್ತಿವಂತನಾಗುವುದರಲ್ಲಿ ಸಂಶಯವೇ ಇಲ್ಲ ಎಂದರು. ನಾರಾಯಣ ಶಾಸ್ತ್ರಿಗಳಂತೆ ಹನುಮಂತರಾವ್ ಜ್ಯೋತಿಷ್ಯ ಕಲಿತಿರದಿದ್ದರೂ ಅವರ ನುಡಿ ಶೀಘ್ರದಲ್ಲಿ ನಿಜವಾಯಿತು. ಎರಡು ವರ್ಷಗಳಲ್ಲೇ (೧೯೯೮) ಅನಂತಕುಮಾರ್ ಕೇಂದ್ರದಲ್ಲಿ ಸಚಿವರಾಗಿ ಅಧಿಕಾರ ಸ್ವೀಕರಿಸಿದ್ದೂ ಆಯಿತು.



ಶ್ರೀ ಹನುಮಂತರಾವ್

ಎಂಟಿಎಸ್ ಕಾಲೊನಿಯ ಹನುಮಂತರಾಯರಂಥ ಹಿರಿಯರನ್ನೂ ಮಿತ್ರರನ್ನೂ ಅನಂತಕುಮಾರ್ ಎಂದಿಗೂ ಮರೆಯಲಿಲ್ಲ. ತಮ್ಮ ಮಗಳು ಐಶ್ವರ್ಯಾ ಮದುವೆಯ ಸಂದರ್ಭದಲ್ಲಿ ಅನಂತಕುಮಾರ್ ಹನುಮಂತರಾಯರ ಮನೆಗೆ ಖುದ್ದಾಗಿ ತೆರಳಿ ಮದುವೆಗೆ ಆಹ್ವಾನಿಸಿದರು. ಮದುವೆಯ ದಿನದಂದು ಹನುಮಂತರಾವ್ ಬೆಂಗಳೂರು ಅರಮನೆಯ ಮೈದಾನದಲ್ಲಿ ಹುಬ್ಬಳ್ಳಿಯ ಎಂಟಿಎಸ್ ಕಾಲೊನಿಯನ್ನೇ ಕಂಡರು!

## ಅನಂತಪಥ

Editor: **Gopal T.S** | Assistance: **K . Janardhana Thunga** | Layout: **Abhishek Gubbi Creatives**

Inputs: **Diwakar Hegde | Pradeep Oak | Poornaprajna**

Sketches: **Raghupathi Sringeri** | Photographs: **Ananthkumar Pratishthana | Poornaprajna | Adamya Chethana**

Acknowledgements: **All India Radio Mysore | Pramod Jois | Adamya Chethana | Dr. H S Nagaraja**

Printed at: **Rashtrothana Mudranalaya, Chamrajpet, Bengaluru** | Published by: **Dr. Tejaswini Ananthkumar**

For – AnanthKumar Pratishthana # 12, Sumeru,M N Krishna Rao Road, Basavanagudi, Bangalore – 04

Ph: 080 26568484 | Email: ananth.path@akp.org.in


**ಸ್ಪಷ್ಟನೆ:** ಅನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು;
ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.

**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು. ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ.

To get a e-version of this periodical SMS your name and place to 8884182415

## ಅದಮ್ಯ ಸೇವಾ

**( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )**




ಕೋವಿಡ್ ಪೀಡಿತರ ಸೇವೆಯಲ್ಲಿ ನಿರತರಾದ ಆಸ್ಪತ್ರೆಗಳ ಸಿಬ್ಬಂದಿಗೆ 7500 ಕ್ಕೂ ಹೆಚ್ಚು ಮಧ್ಯಾಹ್ನದ ಮತ್ತು ರಾತ್ರಿಯೂಟದ ವಿತರಣೆ



ಶ್ರೀಮತಿ ಸುವಾಸಿನಿ ನಾರಾಯಣ್ ಅವರಿಂದ ಅದಮ್ಯ ಚೇತನ ಪೌಷ್ಟಿಕ ಸಾತ್ವಿಕ ಆಹಾರ ಆಂದೋಲನದ ಉದ್ಘಾಟನೆ



ಕೋವಿಡ್ ಸಂದರ್ಭದಲ್ಲಿ ವಿವಿಧ ರುದ್ರಭೂಮಿಗಳಲ್ಲಿ ಅನ್ನದಾನ




ಕೋವಿಡ್ ಎರಡನೇ ಅಲೆಯ ವಿರುದ್ಧದ ಸಮರಕ್ಕೆ ಕಾರ್ಯಸನ್ನದ್ಧರಾದ ಅದಮ್ಯ ಚೇತನ ಕಾರ್ಯಕರ್ತರು



ಬಟ್ಟೆಯ ಚೀಲಗಳಲ್ಲಿ ಧಾನ್ಯಗಳನ್ನು ತುಂಬಿ ವಿತರಿಸುವ ಪ್ರಕ್ರಿಯೆಗೆ ಚಾಲನೆ



ಹಸಿರು ಭಾನುವಾರದ 285 ನೇ ಕಾರ್ಯಕ್ರಮ



ನಗರ್ತಪೇಟೆಯಲ್ಲಿ ನಿತ್ಯ ಅನ್ನದಾನದ ಪ್ರಾರಂಭ

## ಅನಂತ ಚಿತ್ರಸಂಪುಟ

( ಜೂನ್ ತಿಂಗಳ ನೆನಪಿನ ಹಲವು ಚಿತ್ರಗಳು )

ಸಂಕಲನ: ಶ್ರೀಮತಿ ತೇಜಸ್ವಿನಿ ಅನಂತಕುಮಾರ್



ಸಂಸ್ಕೃತಿ ಖಾತೆಯ ಸಚಿವರಾಗಿದ್ದಾಗ ಅನಂತಕುಮಾರ್ ಮಧ್ಯಕಾಲೀನ ಕಲಾಚಿತ್ರಗಳ ಪ್ರದರ್ಶಿನಿಯಲ್ಲಿ ಭಾಗವಹಿಸಿದ್ದ ಚಿತ್ರ (1999).



ಸಂಸದ್ ಸದಸ್ಯರಾಗಿದ್ದ ಅನಂತಕುಮಾರ್ ಬಿನ್ನಿಪೇಟೆಯ ಚರ್ಚ್ ನ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದರು (2002).



ಕರ್ನಾಟಕ ಜೈನ್ ಭವನದ ಕಟ್ಟಡದ ಭೂಮಿಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂದರ್ಭದ ಚಿತ್ರ (2000).



ರಾಯಗಡದಲ್ಲಿ ಶಿವಾಜಿ ಮಹಾರಾಜರ ಕೋಟೆಯ ಅಭಿವೃದ್ಧಿಗೆ ಕೇಂದ್ರದ ನೆರವು ಘೋಷಿಸಿದ ಸಂದರ್ಭದ ಚಿತ್ರ (2000).



ಬ್ರಹ್ಮಪುತ್ರ ದರ್ಶನ (2001).



ಖ್ಯಾತ ಕವಿ ಸಿದ್ದಲಿಂಗಯ್ಯರವರೊಡನೆ ಸಮಾರಂಭವೊಂದರಲ್ಲಿ (2017).